೩೩೬

ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ

ಸಂಗಮೇಶ ಎಂ. ಬಿರಾದಾರ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ನೋ, ೧೯೮೮

ಉಪನ್ಯಾಸ ಗ್ರಂಥಮಾಲೆ

೩೩೬

ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ

ಸಂಗಮೇಶ ಎಂ. ಬಿರಾದಾರ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಪ್ರಕಾಶಕರು :

ಎಸ್. ಬಿ. ನಾಯಕ

ಕಾರ್ಯನಿರ್ವಾಹಕ ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಮೇ, ೧೯೮೪

ಬೆಲೆ : ೫೦ ಪೈಸೆ

ಮುದ್ರಕರು :

ಅಶೋಕ ಎಲ್. ಆಕಳವಾಡಿ

ವಾಸವಿ ಪ್ರಿಂಟರ್ಸ್,
ಬ್ಯಾಂಕ ರೋಡ, ಧಾಶವಾಡ ೫೮೦ ೦೦೧

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೩೫ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ಅರಿಕೆ

೧೯೭೬ ರಲ್ಲಿ ಕಲಬುರ್ಗಿ ಜಿಲ್ಲೆಯ ಯಡ್ರಾಮಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಏರ್ಪಡಿಸಿದ್ದ ಉಪನ್ಯಾಸ ಶಿಬಿರದಲ್ಲಿ 'ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ' ಎಂಬ ವಿಷಯ ಕುರಿತು ನಾನು ಮಾಡಿದ ಭಾಷಣದ ಲಿಖಿತ ರೂಪವೇ ಈ ಕಿರುಹೊತ್ತಿಗೆ.

ವಿಷಯ ಗಹನವಾದುದು; ಅಷ್ಟೇ ಚರ್ಚಾಸ್ಪದವಾದುದು. ಸಂಪ್ರದಾಯ ಒಂದು ತೆರನಾಗಿ ಹೇಳುತ್ತಿದ್ದರೆ, ಲಿಖಿತ ಸಾಹಿತ್ಯದಲ್ಲಿಯ ಹಲವು ಮುಖಗಳು ತಮ್ಮ ದೃಷ್ಟಿಯಿಂದ ನೋಡಿವೆ. ಹೀಗಿರುವುದರಿಂದ ಇವೆಲ್ಲವುಗಳನ್ನು ನಿರೀಕ್ಷಿಸಿ ನನ್ನ ಬುದ್ಧಿಗೆ ಸಮ್ಮತವೆಂದು ತೋರಿದುದನ್ನು ಇಲ್ಲಿ ಪ್ರತಿಪಾದಿಸಲು ಪ್ರಯತ್ನಿಸಿದ್ದೇನೆ.

ಅನುಭವ ಮಂಟಪದಲ್ಲಿ ಅಕ್ಕಮಹಾದೇವಿಯು ಒಂದೇ ದಿನವಿರಲಿಲ್ಲ. ಹಲವು ದಿನಗಳನ್ನು ಕಳೆದಿರಲು ಸಾಕು. ಇದು ಅವಳ ಮತ್ತು ಇನ್ನಿತರರ ವಚನಗಳಿಂದ ವೇದ್ಯವಾಗುತ್ತದೆ. ಆದ್ದರಿಂದ ಬೇರೆ ಬೇರೆ ದಿನಗಳಲ್ಲಿ ಹೇಗೆ ಚರ್ಚೆ ನಡೆದಿರಬಹುದೆಂಬುದನ್ನು ಊಹಿಸಿ ವಿಭಾಗಿಸಿದ್ದೇನೆ. ಇದು ಹೊಸದು. ಖಚಿತವಾಗಿ ಹೇಳಲು ಸಾಧ್ಯವಿಲ್ಲದ್ದರಿಂದ ತಮ ತಮಗೆ ಸರಿ

ಕಂಡಂತೆ ತರ್ಕಿಸುವುದು ಸಹಜ. ಇದೂ ಅಂತಹ ಒಂದು ತರ್ಕ. ಪ್ರಾಜ್ಞರು ಇದನ್ನು ಪರಾಮರ್ಶಿಸಬೇಕು.

ನನ್ನ ಕೆಲವು ವಿಚಾರಗಳನ್ನು ಜನತೆಯ ಮುಂದಿಡಲು ಅನುವು ಮಾಡಿಕೊಟ್ಟ ಪ್ರಸಾರಾಂಗದ ನಿರ್ದೇಶಕರಿಗೂ ಸಹಾಯಕ ನಿರ್ದೇಶಕರಿಗೂ ವಂದನೆಗಳು, ಕೆಲವು ಸಮಸ್ಯೆಗಳನ್ನು ಕುರಿತು ಕೇಳಿದಾಗ ಮುಕ್ತ ಮನಸ್ಸಿನಿಂದ ಸಲಹೆಗಳನ್ನಿತ್ತ ಶ್ರೀ ಶಿವಕುಮಾರ ತುಂಗಳ, ಪ್ರೊ. ಎಸ್.ಜಿ. ಹಿರೇಮಠ, ಜಮಖಂಡಿ ಅವರಿಗೂ ಹಾಗೂ ಇನ್ನಿತರ ಗೆಳೆಯರಿಗೂ ನಾನು ಋಣಿಯಾಗಿದ್ದೇನೆ. ವಿಷಯದ ಮೇಲಿನ ಮಮತೆಯಿಂದ ಆಸಕ್ತಿ ವಹಿಸಿ ಕೇಳಿ ಮೆಚ್ಚಿಕೊಂಡ ಉದಾರಮಿಯ ಸಹೃದಯರಿಗೆ ನನ್ನ ಕೃತಜ್ಞತೆಗಳು.

ಡಾ. ಸಂಗಮೇಶ ಎಂ. ಬಿರಾದಾರ

ಕಲೆ ಮತ್ತು ವಿಜ್ಞಾನ ಮಹಾವಿದ್ಯಾಲಯ,
ಜಮಖಂಡಿ

೧-೪-೧೯೮೪

ಅನುಕ್ರಮಣಿಕೆ

೧. ಅನುಭವ ಮಂಟಪಕ್ಕೆ ಮೊದಲು

ಹನ್ನೆರಡನೆಯ ಶತಮಾನವು ಕನ್ನಡ ನಾಡಿನಲ್ಲಿ ಒಂದು ಕ್ರಾಂತಿಯ ಕಿಡಿಯನ್ನೇ ಕೆದರಿತು. ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿಯೂ ಈ ಕ್ರಾಂತಿ ನಡೆಯಿತು. ಈ ಕ್ರಾಂತಿಗೆ ಸಾಂಪ್ರದಾಯಿಕ ಜಡತೆಯಿಂದ ಕೊಡವಿಕೊಂಡಿದ್ದ ಆಚಾರ-ವಿಚಾರಗಳೇ ಮೂಲ ಕಾರಣವಾದುವು. ಎಂತಹ ಕ್ರಾಂತಿಗೂ ಆಚಾರ-ವಿಚಾರಗಳೇ ಮೂಲವೆನ್ನುವುದನ್ನು ಇದು ತೋರಿಸಿಕೊಟ್ಟಿತು. ಇದಕ್ಕೆ ನಾಂದಿಯನ್ನು ಹಾಡಿದವರು ಬಸವಾದಿ ಶಿವಶರಣರು.

ಈ ಕಾಲದಲ್ಲಿ ವೈದಿಕ ಪರಂಪರೆಯಲ್ಲಿ ಮೂಗ ತತ್ವಗಳನ್ನು ಬದಿಗಿರಿಸಿ ಡಾಂಬಿಕತನವು ಎಲ್ಲೆಡೆಗೂ ತನ್ನ ಕರಾಳ ಕೆನ್ನಾಲಗೆಯನ್ನು ಚಾಚಿತ್ತು. ವೈದಿಕ ಕರ್ಮಮಾರ್ಗ ಸಾಂಪ್ರದಾಯಿಕ ಸವಕಲು ಹಾದಿಯಲ್ಲೇ ಸಾಗಿದ್ದರೆ ಅದ್ವೈತ ಮತ್ತು ವಿಶಿಷ್ಟಾದ್ವೈತಗಳಲ್ಲಿ ಒಂದು ರೀತಿಯ ಪಾಂಡಿತ್ಯ ಪ್ರದರ್ಶನ ಪ್ರವೃತ್ತಿಯ ಪೈಪೋಟಿ ನಡೆದಿತ್ತು. ಜನಸಾಮಾನ್ಯರಿಗೆ ಈ ದರ್ಶನಗಳು ನಿಲುಕದಾಗಿದ್ದವು. ಇದೇ ವೇಳೆಯಲ್ಲಿ ಕ್ರಮೇಣ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಿದ್ದ ಜೈನಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಅಹೋರಾತ್ರಿ ಪ್ರಯತ್ನಿಸುತ್ತಿದ್ದಿತು. ಪೈಪೋಟಿಯ ಈ ಪ್ರಸಂಗದಲ್ಲಿ ಶ್ರೀಸಾಮಾನ್ಯನು ಯಾವುದನ್ನು ಅವಲಂಬಿಸಬೇಕೆನ್ನುವುದು ತಿಳಿಯ

ದಾಗಿ ಕಕ್ಕಾವಿಕ್ಕಿಯಾಗಿದ್ದ. ಇಂತಹ ಇರುಕಿನ ಪ್ರಸಂಗದಲ್ಲಿ ಧಾರ್ಮಿಕ ಮಾರ್ಗದರ್ಶಕರ ಆವಶ್ಯಕತೆಯಿತ್ತು. ಆಗ ತಮ್ಮ ನಡೆ-ನುಡಿಗಳಿಂದಲೂ ಸಚ್ಚಾರಿತ್ರ್ಯದಿಂದಲೂ ಆದರ್ಶಪ್ರಾಯ ರಾಗಿ ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣರಂತಹರ ನೇತೃತ್ವದಲ್ಲಿ ಒಂದು ಸಮುದಾಯವೆ ಮೂಡಿಬಂದಿತು. ಇಲ್ಲಿ ಜಾತಿ-ಮತಗಳ ಗೊಂದಲವಿರಲಿಲ್ಲ, ಸ್ತ್ರೀ-ಪುರುಷರೆಂಬ ತಾರ ತಮ್ಯವಿರಲಿಲ್ಲ. ಮೇಲು-ಕೀಳುಗಳ ಭೇದವಿರಲಿಲ್ಲ. ಆಚಾರ-ವಿಚಾರಗಳ ಒರೆಗಲ್ಲಿಗೆ ಸಲ್ಲುವವರೆಲ್ಲರು ಇಲ್ಲಿ ಭಾಗಿಗಳು. ಈ ವಿಚಾರ ಮಂಥನಕ್ಕೆ ಅವಕಾಶವನ್ನಿತ್ತ ಸ್ಥಾನವೇ ಅನುಭವ ಮಂಟಪ. ಅಲ್ಲಮಪ್ರಭುವೇ ಇದಕ್ಕೆ ಅಧ್ಯಕ್ಷ. ಬಸವಣ್ಣನೆ ಕಾರ್ಯನಿರ್ವಾಹಕ. ಚನ್ನಬಸವಣ್ಣನೇ ಶಿಲ್ಪಿ. ಇನ್ನುಳಿದ ಶರಣ-ಶರಣೆಯರೆಲ್ಲರು ರೂವಾರಿಗಳು. ಇಲ್ಲಿ ಆಡುವ ಒಂದು ಮಾತೂ ಆಣಿ ಮುತ್ತು. ಇದರಿಂದ ಹೊರಹೊಮ್ಮಿದ ಪ್ರಕಾಶವೇ ವೀರಶೈವ ಧರ್ಮ, ವಿಶ್ವಧರ್ಮ. ವಿಶ್ವಕ್ಕೆ ಕನ್ನಡ ನಾಡು ಕೊಟ್ಟ ಅತ್ಯಮೌಲ್ಯ ಕಾಣಿಕೆ.

ಅನುಭವ ಮಂಟಪವೆಂಬುದು ಬಸವಣ್ಣನವರು ಜ್ಞಾನ ದಾಸೋಹಕ್ಕಾಗಿ ನಿರ್ಮಿಸಿದ ಮಹಾಮನೆ. ಇದನ್ನು ಬಸವ ಸದನವೆಂತಲೂ ಕರೆಯಲಾಗುತ್ತಿತ್ತು. ಬಹುತರವಾಗಿ ವಿಸ್ತಾರ ವಾದ ಈ ಮಹಾಮನೆಯಲ್ಲಿ ಅನುಭಾವ ಗೋಷ್ಠಿಯನ್ನು ನಡೆಸುತ್ತಿದ್ದರಾದ್ದರಿಂದ ಇದಕ್ಕೆ 'ಅನುಭವ ಮಂಟಪ' ವೆಂಬ ಅನ್ವರ್ಥಕ ನಾಮವೂ ಇತ್ತು. ಇಲ್ಲಿಯ ಚರ್ಚೆ ಅನುಭಾವ ಗೋಷ್ಠಿ. ಇದರಲ್ಲಿ ಅನೇಕ ಶರಣ-ಶರಣೆಯರು ಭಾಗಿಗಳು.

ಕೇವಲ ಕರ್ನಾಟಕದವರಷ್ಟೇ ಅಲ್ಲ; ಭಾರತದ ಬೇರೆ ಬೇರೆ ಭಾಗಗಳಿಂದಲೂ ಅನೇಕರು ಇಲ್ಲಿ ಬಂದು ಈ ಗೋಷ್ಠಿಯಲ್ಲಿ ಪಾಲ್ಗೊಂಡಿರುವುದನ್ನು ಇಲ್ಲಿ ಕಾಣುತ್ತೇವೆ. ಉತ್ತರದ ಕಾಶ್ಮೀರ ದೇಶದಿಂದ ಮೋಳಿಗೆಯ ಮಾರಿ ತಂದೆಗಳು, ಸೌರಾಷ್ಟ್ರ ದಿಂದ ಹರದ ಆದಯ್ಯನವರು,ತೆಲುಗುದೇಶದಿಂದ ಜೊಮ್ಮಯ್ಯ ನವರು, ಮೈದೂನ ರಾಮಯ್ಯನವರು, ದಕ್ಷಿಣ ದೇಶದಿಂದ ಸಕಲೇಶ ಮಾದಯ್ಯನವರು, ಕಲಿಂಗ ದೇಶದಿಂದ ಮರುಳು ಶಂಕರದೇವರು, ಕುಂತಲ ನಾಡಿನಿಂದ ಏಕಾಂತಯ್ಯನವರು ಇವರೇ ಮೊದಲಾದವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸ ಬಹುದು. ಪ್ರವಾಸ ಸೌಕರ್ಯವಿಲ್ಲದೆ ಇರುವ ಆ ಕಾಲದಲ್ಲಿ ಕಾಶ್ಮೀರದಂತ ದೂರದೇಶದಿಂದ ಜನರು ಬಂದರೆಂದರೆ ಈ ಅನುಭವ ಮಂಟಪದ, ಬಸವಾದಿ ಶರಣರ, ಪ್ರತೀತಿ ಎಷ್ಟಿದ್ದಿ ತೆಂಬುದು ವೇದ್ಯವಾಗಬಾರದು.

ಅನುಭವ ಮಂಟಪದಲ್ಲಿ ನಡೆಯುವ ಚರ್ಚೆಯು ಆತ್ಮಾ ನಾತ್ಮ ಸಂಬಂಧವಾದ ಧಾರ್ಮಿಕ ವಿಷಯುವಾಗಿರುತ್ತಿತ್ತು. ಅದೂ ಕೂಡ ಶುಷ್ಕತಾರ್ಕಿಕವಾಗಿರದೆ ಅನುಭವ ಪೂರ್ಣ ವಾದುದಾಗಿರುತ್ತಿತ್ತು. ಅಂತೆಯೇ ಈ ಚರ್ಚೆಗೆ ಅನುಭಾವ ಗೋಷ್ಠಿ ಎಂದು ಕರೆಯಲಾಗುತ್ತಿತ್ತು. ಇಲ್ಲಿ ಪಾಂಡಿತ್ಯ ಪ್ರದರ್ಶಿಸಬೇಕು, ಗೆಲುವನ್ನು ಸಾಧಿಸಬೇಕು, ಬಿರುದು ಬಾವು ಗಳನ್ನು ಸಂಪಾದಿಸಬೇಕು, ಎನ್ನುವ ಯಾವ ಹವ್ಯಾಸವೂ ಇರಲಿಲ್ಲ. ಯಾವ ಪ್ರತಿಷ್ಠೆಯೂ ಅವರಿಗೆ ಬೇಕಾಗಿರಲಿಲ್ಲ. ಹೀಗಿರುವುದರಿಂದ ಇಲ್ಲಿಯ ಚರ್ಚೆಯಲ್ಲಿ ಹೆಚ್ಚುಗಾರಿಕೆಯು

ಪ್ರಮೇಯವೇ ಇರಲಿಲ್ಲ. ಉಪನಿಷತ್ಕಾಲದಲ್ಲಿಯೂ ಇಂತಹ ಒಂದು ರೀತಿಯ ಜಿಜ್ಞಾಸೆಯನ್ನು ಕಾಣುತ್ತೇವೆ.

ಈ ಆತ್ಮಾನಾತ್ಮ ವಿವೇಚನೆಯ ಜೊತೆಗೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವುದೂ ಇವರ ಉದ್ದೇಶವಾಗಿತ್ತು. ಸಾಮಾಜಿಕ ನೆಮ್ಮದಿಯಿಲ್ಲದಿರುವಾಗ ಯಾವ ಧಾರ್ಮಿಕ ಕಾರ್ಯವೂ ಸುಲಭವಾಗಿ ನೆರವೇರದೆಂಬುದನ್ನು ಇವರು ಮನಗಂಡಿದ್ದರು. ಅಂತೆಯೇ ನೈತಿಕತೆಗೂ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದರು,

ಸಂಪ್ರದಾಯ ಬದ್ಧರು ಬಸವಾದಿಶರಣರ ಪ್ರಖರವಾದ ವಿಚಾರಧಾರಣೆಯಿಂದ ಪ್ರಕ್ಷುಬ್ಧಗೊಂಡರು. ವಂಶ ಪಾರಂಪರ್ಯವಾಗಿ ಸಹಜವಾಗಿ ಬಂದ ಪ್ರತಿಷ್ಠೆಗೆ ಆತಂಕವಾಗುವುದೆಂಬ ಭಾವನೆಯಿಂದ ಪ್ರತಿರೋಧವೊಡ್ಡಿದರು. ರಾಜನ ಮುಂದೆಯೂ ದೂರುಗಳನ್ನು ಒಯ್ದರು. ಹೀಗಾಗಿ ಸುವ್ಯವಸ್ಥಿತವಾಗಿ ನಡೆದ ಈ ಗೋಷ್ಠಿಗೆ ವಿಘ್ನಗಳು ಬರಲಾರಂಭಿಸಿದವು. ಸಾಮಾನ್ಯವಾಗಿ ಪ್ರಗತಿಪರ ಕಾರ್ಯಗಳಿಗೆಲ್ಲ ಹೀಗೆ ಅಡೆತಡೆಗಳು ಬಂದಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಹೀಗೆ ಅಡ್ಡಿ-ಆತಂಕಗಳು ಬಂದೊಡ್ಡಿದಾಗ ಸ್ವಾಭಾವಿಕವಾಗಿಯೆ ವಾತಾವರಣವೆಲ್ಲ ಕ್ಷೋಭಗೊಂಡಿತು. ನೆಮ್ಮದಿಯ ಬೀಡಾಗಿದ್ದ ಕಲ್ಯಾಣಪಟ್ಟಣ ವಿಪ್ಲವಕ್ಕೆ ಒಳಗಾಗಬೇಕಾಯಿತು. ಇದರಿಂದ ಒಂದೆಡೆ ಸೇರಿದ ಅನುಭಾವಿಗಳು ಚದುರಿದರು. ಆಶ್ರಯ ಸಿಕ್ಕಲ್ಲಿ ತಲೆಮರೆಸಿಕೊಂಡರು. ಅನುಭವದ ನವನೀತಗಳಾದ ವಚನಗಳು ಎಲ್ಲೆಲ್ಲಿಯೊ ಕತ್ತಲೆಯಲ್ಲಿ ಉಳಿದುಕೊಂಡವು.

ಆದರೂ ಅಂದು ಅನುಭವ ಮಂಟಪದಲ್ಲಿ ಚರ್ಚೆಮಾಡಿ ಬಿತ್ತಿದ್ದ ವೈಚಾರಿಕತೆಯ ಬೀಜ ಮಾತ್ರ ಎಲ್ಲೆಡೆಗು ಉಳಿದುಕೊಂಡಿತ್ತು. ನಿಧಾನವಾಗಿ ಒಳಗೊಳಗೆ ಮೊಳೆಯ ತೊಡಗಿತ್ತು. ವಿಕಾಸ ಕ್ಕಾಗಿ ಅವಕಾಶವನ್ನು ಕಾಯುತೊಡಗಿತ್ತು.

ಆ ದಿನ ಬಂದಿತು. ೧೫ ನೆಯ ಶತಮಾನದ ವಿಜಯ ನಗರದ ಪ್ರೌಢದೇವರಾಯನ ಕಾಲದಲ್ಲಿ ಮತ್ತೆ ಅನುಭಾವಿಗಳು ಒಂದೆಡೆ ಸೇರಿದರು. ನೂರೊಂದು ವಿರಕ್ತರು ಮುಂದಾದರು. ೧೨ ನೆಯ ಶತಮಾನದಲ್ಲಿ ಆಗಿ ಹೋದ ಶರಣರ ವಿಚಾರ ಗಳನ್ನು ಒಂದೆಡೆ ಕೂಡಿಸಲು ತೊಡಗಿದರು. ಅವುಗಳ ಮೇಲೆ ಟೀಕೆ-ಟಿಪ್ಪಣೆಗಳನ್ನು ಬರೆದರು. ಹೀಗೆ ರೂಪುಗೊಂಡು ಹೊರ ಬಂದವುಗಳೆ 'ಶೂನ್ಯಸಂಪಾದನೆ' 'ಲಿಂಗಲೀಲಾವಿಲಾಸ ಚಾರಿತ್ರ' 'ಷಟ್‌ಸ್ಥಲವಚನಗಳು' ಮುಂತಾದ ಸಂಗ್ರಹ ಗ್ರಂಥ ಗಳು, ಮಹಾದೇವಿಯಕ್ಕನ ಅನುಭವ ಮಂಟಪದಲ್ಲಿಯ ಪ್ರಸಂಗ ಬರುವುದು ಈ ಶೂನ್ಯಸಂಪಾದನೆಯಲ್ಲಿ.

ಕರ್ನಾಟಕದ ಅನೇಕ ಮಠ-ಮಂದಿರಗಳಲ್ಲಿ ಶಿವಶರಣ ವಚನ ಗಳ ಕಟ್ಟುಗಳು ದೊರೆಯುತ್ತವೆ. ಪ್ರತಿಯ ಮೇಲೆ ಪ್ರತಿ ಯಾಗಿರುವುದು ಕಂಡುಬರುತ್ತದೆ. ಈ ಕಟ್ಟುಗಳಲ್ಲಿ ಒಬ್ಬಿಬ್ಬರ ವಚನಗಳಿರುವಂತೆ ಕೆಲವು ಕಟ್ಟುಗಳಲ್ಲಿ ವೈಷಯಿಕವಾಗಿಯೂ ಸ್ಥಲಕಟ್ಟಿಗೆ ಹೊಂದಿಕೊಳ್ಳುವಂತೆಯೂ ದೊರೆಯುತ್ತವೆ.

ಅನುಭವ ಮಂಟಪದಲ್ಲಿ ನಿತ್ಯ ನಡೆಯುವ ಅನುಭಾವ ಗೋಷ್ಠಿಯನ್ನು ತೀಕ್ಷ್ಣ ಮತಿಗಳೂ ಶೀಘ್ರ ಲಿಪಿಕಾರರೂ ಬರೆ ದಿಟ್ಟುಕೊಂಡಿರಬೇಕು. ಅವುಗಳ ಮೇಲೆ ಮತ್ತೆ ಚರ್ಚೆ-ವಿಮರ್ಶೆ

ನಡೆದಿರಬೇಕು. ಅವು ಒಂದು ಸ್ವರೂಪಕ್ಕೆ ಬರುವ ಮೊದಲೇ ಕಲ್ಯಾಣದಲ್ಲಿ ಕ್ರಾಂತಿಯಾಗಿ ಈ ಅನುಭಾವಿಗಳೆಲ್ಲ ಎತ್ತೆತ್ತಲೋ ಚದುರಿ ಹೋಗಿರಬೇಕು. (ಇದಕ್ಕೆ ಕುರುಹುಗಳು ದೊರೆಯುತ್ತವೆ.) ಇಂತಹ ಪ್ರಸಂಗದಲ್ಲಿ ಮೊದಲು ಬರೆದಿಟ್ಟವರಾಗಲಿ, ಅವರ ಕಾಲಾನಂತರ ಮುಂದಿನವರಾಗಲಿ ಮತ್ತೆ ಅದರಲ್ಲಿ ಕೃಷಿ ಮಾಡಿರಬೇಕು. ತಮ್ಮ ಅನುಭಾವವನ್ನು ಅದರಲ್ಲಿ ಸೇರಿಸಿರಬೇಕು. ಷಟ್‌ಸ್ಥಲದ ವಚನಗಳಲ್ಲಿ ಬೇರೆ ಬೇರೆ ಶರಣರ ವಚನಗಳು ಪ್ರಸಂಗಾನುಸಾರ ಬಂದಿದ್ದರೂ ಅಲ್ಲಿ ಯಾವುದೇ ಒಬ್ಬ ವ್ಯಕ್ತಿಗೆ ಪ್ರಾಮುಖ್ಯತೆಯಿಲ್ಲ. ಆದರೆ ಶೂನ್ಯ ಸಂಪಾದನೆಯಲ್ಲಿ ಅಲ್ಲಮಪ್ರಭುವೇ ಮುಖ್ಯ. ಅವನ ಸಮ್ಮುಖದಲ್ಲಿ ಉಳಿದವರ ವ್ಯಕ್ತಿತ್ವ ವಿಕಾಸವಾಗಿದೆ.

ಹೀಗೆ ಚಾರಿತ್ರಿಕತೆಯೊಡನೆ ಕಲ್ಪನೆಯೂ ಸೇರಿ ಈ ಸಂಗ್ರಹಗಳು ಸಿದ್ಧವಾಗಿರುವಂತೆ ನಮಗೆ ತೋರುತ್ತದೆ. ಈ ವಿಷಯದಲ್ಲಿ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. ಇಲ್ಲಿ ಆ ಸಮಗ್ರ ವಿವೇಚನೆಗೆ ಅವಕಾಶವಿಲ್ಲ.

ಈ ಶೂನ್ಯಸಂಪಾದನೆಯು ಶಿವಗಣಪ್ರಸಾದಿ ಮಹಾದೇವಯ್ಯನವರಿಂದ ಪ್ರಾರಂಭವಾಗಿ ಗುಮ್ಮಳಾಪುರದ ಸಿದ್ಧಲಿಂಗದೇವರು, ಕೆಂಚವೀರಣ್ಣೊಡೆಯರು ಇವರಿಂದ ಪರಿಷ್ಕರಣಗೊಂಡು ಕೊನೆಗೆ ಗೂಳೂರು ಸಿದ್ಧವೀರಣ್ಣೊಡೆಯರಿಂದ ಒಂದು ರೀತಿಯಿಂದ ಪೂರ್ಣತ್ವವನ್ನು ಪಡೆಯಿತು. ಇಂದು ಪ್ರಚುರವಾಗಿದ್ದುದು ಈ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯೇ ಆಗಿದೆ. ಇವೆಲ್ಲ ಸಂಪಾದನೆಗಳಲ್ಲಿ ಶ್ರೀ

ಮದಲ್ಲಮಪ್ರಭುವೇ ಮುಖ್ಯನಾದುದರಿಂದ ಅವರೆಲ್ಲರು ತಂತಮ್ಮ ಸಂಪಾದನೆಗಳನ್ನು 'ಪ್ರಭುದೇವರ ಶೂನ್ಯಸಂಪಾದನೆ' ಎಂದೇ ಕರೆದರು. ಅದನ್ನೇ ಆಧಾರವಾಗಿರಿಸಿಕೊಂಡು ಉಳಿದ ವುಗಳನ್ನು ಪ್ರಸಂಗಾನುಸಾರ ಸೇರಿಸಿ 'ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ'ಯ ಮಹಂತತೆಯನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

೨. ಅಕ್ಕಮಹಾದೇವಿ

ಅಕ್ಕಮಹಾದೇವಿ ಹನ್ನೆರಡನೆಯ ಶತಮಾನದ ಶಿವಶರಣೆ ಯರಲ್ಲಿ ಅಗ್ರಮಾನ್ಯಳು. 'ಅಕ್ಕ' ಎಂಬ ಗೌರವಸೂಚಕ ಶಬ್ದ ದಿಂದ ಕರೆಯಿಸಿಕೊಂಡು ಆ ಶಬ್ದಕ್ಕೆ ಒಂದು ಹಿರಿಮೆಯನ್ನು ತಂದುಕೊಟ್ಟವಳು. ವೈರಾಗ್ಯದ ಸಾಕಾರ ಮೂರ್ತಿಯಾದ ವಳು. ಇಂತಹಅಕ್ಕನ ಚರಿತ್ರೆ ಮಹಾಕವಿ ಹರಿಹರನ ಮಹಾ ದೇವಿಯಕ್ಕನ ರಗಳೆ, ಪ್ರಭುಲಿಂಗಲೀಲೆ, ಶೂನ್ಯಸಂಪಾದನೆ ಅಲ್ಲದೆ ವೀರಶೈವರ ಅನೇಕ ಚಾರಿತ್ರಿಕ ಗ್ರಂಥಗಳಲ್ಲಿ ಮೂಡಿ ಬಂದಿದೆ.

ಐತಿಹಾಸಿಕ ದೃಷ್ಟಿಯಿಂದ ಹರಿಹರನ ರಗಳೆಯೇ ಹೆಚ್ಚು ಪ್ರಮಾಣಭೂತವೆನಿಸುತ್ತದೆ, ಏಕೆಂದರೆ ಹರಿಹರನು ಅಕ್ಕನಿಗೆ ತೀರಸಮೀಪವರ್ತಿಯಾದ ಅಂದರೆ ಅಕ್ಕನನ್ನು ನೋಡಿರದಿ ದ್ದರೂ ನೋಡಿದವರ ಬಾಯಿಯಿಂದ ಕೇಳಿ ತಿಳಿದುಕೊಳ್ಳಲು ಸಾಧ್ಯವಿದ್ದ ಕಾಲದಲಿದ್ದವನು. ಚರಿತ್ರೆ ಪವಾಡವಾಗುವ ಅವಧಿಗಿಂತ ಮೊದಲಿದ್ದವನು. ಆದರೂ ಹರಿಹರನು ಮಹಾತ್ಮ ರನ್ನು ಅಲೌಕಿಕ ದೃಷ್ಟಿಯಿಂದ ಕಾಣುತ್ತಿದ್ದುದರಿಂದ ಅಲ್ಲಲ್ಲಿ

ಕೆಲವು ಅಂತಹ ಘಟನೆಗಳು ಬಂದಿರುವುದರಲ್ಲಿ ಯಾವ ಆಗಾಧ ತೆಯಿಲ್ಲ.

ಶೂನ್ಯಸಂಪಾದನೆ ವಚನಗಳ ಸಂಗ್ರಹ, ವಚನಗಳಿಂದಲೇ ಅವರವರ ವ್ಯಕ್ತಿತ್ವವನ್ನು ರೂಪಿಸುವ ಮಹಾನ್‌ಗ್ರಂಥ. ಇದೂ ಅಷ್ಟೇ ಪ್ರಮಾಣಭೂತವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಗ್ರಂಥವು ಶಿವಗಣಪ್ರಸಾದಿ ಮಹಾದೇವಯ್ಯನವ ರಿಂದ ಪ್ರಾರಂಭವಾಗಿ, ಗುಮ್ಮಳಾಪುರದ ಸಿದ್ಧಲಿಂಗದೇವರು, ಕೆಂಚ ವೀರಣ್ಣೊಡೆಯರು ಇವರಿಂದ ಪರಿಷ್ಕರಣಗೊಂಡು ಕೊನೆಗೆ ಗೂಳೂರು ಸಿದ್ಧವೀರಣ್ಣೊಡೆಯರಿಂದ ಪೂರ್ಣತ್ವ ವನ್ನು ಪಡೆಯಿತು. ಇಂದು ಪ್ರಚುರವಿದ್ದುದು ಈ ಸಂಪಾದ ನೆಯೆ. ಇವು ಒಂದರಿಂದ ಇನ್ನೊಂದು ಪರಿಷ್ಕರಣಗೊಳ್ಳು ವಾಗ, ಕೆಲವು ಮಾರ್ಪಾಡುಗಳಾಗಿರುವುದು ಕಂಡು ಬರುತ್ತದೆ. ಈ ಮಾರ್ಪಾಡುಗಳು ಒಂದರಿಂದ ಇನ್ನೊಂದು ತದ್ವಿರುದ್ಧ ವೆನ್ನುವ ಮಟ್ಟಿಗೂ ನಡೆದಿವೆ. ಆದ್ದರಿಂದ ಇಲ್ಲಿ ಚಾರಿತ್ರಿಕತೆ ಯೊಂದಿಗೆ ಕಲ್ಪನೆ ತನ್ನ ಕೆಲಸವನ್ನು ಮಾಡಿರಬೇಕೆಂದು ಅನಿಸು ವಂತಿದೆ.

ಸ್ವಲ್ಪ ಹೆಚ್ಚು ಕಡಿಮೆ ಶೂನ್ಯ ಸಂಪಾದನೆಗಳ ರೀತಿಯಲ್ಲಿ ಕಾವ್ಯಮಯವಾಗಿ ಮೂಡಿಬಂದಿರುವುದು ಪ್ರಭುಲಿಂಗಲೀಲೆ ಯಲ್ಲಿಯ ಅಕ್ಕನ ಚರಿತ್ರೆ. ಅಕ್ಕನಿಗೆ ತೀರ ಸಮೀಪವರ್ತಿ ಯಾಗಿದ್ದರೂ ಹರಿಹರನು ಆಕೆಯ ತಂದೆ-ತಾಯಂದಿರ ಹೆಸರನ್ನು ಹೇಳದೇ ಕೇವಲ ಶಿವಭಕ್ತ-ಶಿವಭಕ್ತೆ ಎಂದೇ ಕರೆದಿದ್ದಾನೆ. ಗುರುವಿನ ಹೆಸರನ್ನೂ ಹೇಳಿಲ್ಲ. ಚಾಮರಸನು ರೂಪಕವಾಗಿ

ಇವರೆಲ್ಲರ ಹೆಸರನ್ನು ಹೇಳಿದ್ದಾನೆ. ಆದ್ದರಿಂದ ಕೇವಲ ಶಿವ ಭಕ್ತ-ಶಿವಭಕ್ತೆ ಎನ್ನುವುದಕ್ಕಿಂತ ಚಾಮರಸನ ಹೆಸರುಗಳಿಂದ ಕರೆಯುವುದರಲ್ಲಿ ಯಾವ ನ್ಯೂನತೆಯೂ ಇಲ್ಲ. ಬಾಲ್ಯವನ್ನು ಅಷ್ಟೇ ಸೊಗಸಾಗಿ ಕಾವ್ಯಮಯವಾಗಿ ಚಿತ್ರಿಸಿದ್ದಾನೆ. ಆದ್ದರಿಂದ ಚಾಮರಸನ ಈ ಚಿತ್ರಣದಲ್ಲಿ ಚಾರಿತ್ರಿಕ ಸತ್ಯದೊಡನೆ ಕಲ್ಪನಾವಿಲಾಸವು ಸೇರಿಕೊಂಡು ಮನೋಜ್ಞವಾಗಿದೆ.

ಚಾಮರಸನ ತರುವಾಯದ ವೀರಶೈವಕವಿಗಳು ಬಹುತರವಾಗಿ ಇವನನ್ನೇ ಅನುಸರಿಸಿಕೊಂಡು ಹೋಗಿದ್ದಾರೆ. ಆದ್ದರಿಂದ ಮೇಲಿನ ಈ ಮೂರನ್ನು ನೋಡಿಕೊಂಡು ಅಕ್ಕನ ಚರಿತ್ರೆಯನ್ನು ರೂಪಿಸುವುದು ಸೂಕ್ತ. ಅಂತೆಯೇ ಇವುಗಳಲ್ಲಿಯ ಅಲೌಕಿಕತೆಯನ್ನು ದೂರೀಕರಿಸಿ ವಾಸ್ತವಾಂಶಗಳಿಂದ ಅಕ್ಕನ ಚರಿತ್ರೆಯನ್ನು ಇಲ್ಲಿ ರೂಪಿಸಲಾಗಿದೆ.

ಕರ್ನಾಟಕದ ಉಡುತಡಿಯೆಂಬುದು ಒಂದು ಊರು. ಅದನ್ನು ಕೌಶಿಕನೆಂಬ ದೊರೆ ಆಳುತ್ತಿದ್ದನು. ಆ ಊರಲ್ಲಿ ನಿರ್ಮಲ ಸುಮತಿಯರೆಂಬ ದಂಪತಿಗಳು, ಶಿವಲಿಂಗನಿಷ್ಠಾಪರರಾಗಿ ಜೀವನವನ್ನು ಸಾಗಿಸುತ್ತಿದ್ದರೂ ಸಾತ್ವಿಕಗುಣಸಂಪನ್ನರಾದ ಅವರಿಗೆ ಒಂದು ಹೆಣ್ಣು ಮಗು ಜನಿಸಿತು. ಆ ಮಗುವಿಗೆ ತಂದೆ-ತಾಯಂದಿರು ಪ್ರೀತಿಯಿಂದ 'ಮಹಾದೇವಿ' ಎಂದು ನಾಮಕರಣ ಮಾಡಿದರು. ಮಗು ನೋಡುಗರ ಕಣ್ಮಣಿಯಾಗಿ ಮುದ್ದಿನಿಂದ ಬೆಳೆಯಿತು.

ದಿನಗಳೆದಂತೆ ಬಾಲ್ಯ ಕಳೆದು ಯೌವನಾವಸ್ಥೆ ಅಂಕುರಿಸಿತು. ಇದರಿಂದ ಅವಳ ಸಹಜ ಸೌಂದರ್ಯವು ಇಮ್ಮಡಿಸಿತು.

ಹೀಗಿರಲು ಒಂದು ದಿನ ಆ ಪಟ್ಟಣದ ದೊರೆ ಕೌಶಿಕನು ವೈಹಾಳಿಯಿಂದ ಮರಳುವಾಗ ಎಲ್ಲರೋಪಾದಿಯಲಿ ಮಹಾದೇವಿಯೂ ಆ ಉತ್ಸವವನ್ನು ನೋಡುವ ತವಕದಿಂದ ಬಾಗಿಲಿಗೆ ಆಗಮಿಸಿದಳು. ಅವಳನ್ನು ನೋಡಿದ ರಾಜ ಕಾಮಾತುರದಿಂದ ಕಳವಳಗೊಂಡು ಅವಳ ವಿಷಯವನ್ನು ತಿಳಿದುಕೊಂಡು ಬರುವಂತೆ ಚಾರರನ್ನು ಕಳಿಸಿದನು. ಅವರು ಬಂದು ಅವಳ ವಿಷಯ ವಿವರವನ್ನು ತಿಳಿಸಲು ತಾನು ಅವಳನ್ನು ವರಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಪರಮತೀಯನಾದ ರಾಜನಿಗೆ ತಮ್ಮ ಮಗಳನ್ನು ಕೊಡಲು ತಂದೆ-ತಾಯಿಂದಿರು ಒಪ್ಪದೆ ಪ್ರಗಲ್ಭೆಯಾದ ಅವಳನ್ನೇ ಕೇಳುವಂತೆ ತಿಳಿಸಿದರು. ಹೇಗಿದ್ದರೂ ರಾಜನು ತನ್ನನ್ನು ಒತ್ತಾಯಿಸದಿರನು. ಆದ್ದರಿಂದ ಯುಕ್ತಿಯಿಂದಲೇ ಕಾರ್ಯಸಾಧಿಸಬೇಕೆಂದು ಮಹಾದೇವಿಯು ಅವನು ಶಿವಭಕ್ತನಾದರೆ ತಾನು ಅವನನ್ನು ವರಿಸುವುದಾಗಿ ತಿಳಿಸಿದಳು. ರಾಜನಿಗೆ ಇದೊಂದು ನುಂಗಲಾರದ ತುತ್ತು. ಅವಳ ಕೈ ಹಿಡಿಯಬೇಕಾದರೆ ಮತದ ಹಂಗುದೊರೆಯಬೇಕು. ಸ್ವಮತಾವಲಂಬಿಯಾಗಬೇಕಾದರೆ ಮಹಾದೇವಿಯ ಆಶೆಯನ್ನು ತ್ಯಜಿಸಬೇಕು. ಕೊನೆಗೆ ಕೌಶಿಕನು 'ನಮಗೆ ಶಿವಭಕ್ತಿಯನು ಮಾಡುವ ಸಮಯವಳವಡದು' ಎಂದು ನಿರ್ಣಯವನ್ನು ಮಾಡುತ್ತಿದ್ದಂತೆಯೇ ಮಹಾದೇವಿಯು 'ನಮಗೆ ನಿಮ್ಮಯ ಸಂಗವಳವಡದು.' ಎನ್ನುತ್ತ ಉಟ್ಟ ಬಟ್ಟೆಯನ್ನು, ತೊಟ್ಟ ತೊಡವುಗಳನ್ನು ಕಳಚಿಬಿಟ್ಟು ದಿಗಂಬರೆಯಾಗಿ ನೋಡುಗರ ಬಗೆಗೆ ಭ್ರಮೆಯನ್ನೀಯುತ್ತ ಅರಮನೆಯಿಂದ ಹೊರ ಹೊರಟಳು.

ಅವಳು ನಿರ್ಮಲ ಸುಮತಿಯುರ ಮಂಗಳಲ್ಲವೇ? ಅಂತೆಯೆ ಲೌಕಿಕದ ಜಂಜಾಟವನ್ನು ಹರಿಗೊಗೆದು ಚನ್ನಮಲ್ಲಿಕಾರ್ಜುನನೇ ತನಗೆ ಗಂಡನೆಂದು ಭಾವಿಸಿ ಅವನನ್ನು ಹುಡುಕುತ್ತ ಪೂಸಿದ ಭಸ್ಮ, ಧರಿಸಿದ ಲಿಂಗದಿಂದ ಕೂದಲನ್ನೇ ತನ್ನಂಗಕ್ಕೆ ಮರೆಮಾಡಿಕೊಂಡು,[2] ಅಲ್ಲಲ್ಲಿ ನಿಂತು, ಆತ್ಮಸ್ವರೂಪವನ್ನು ಅರುಹುವ ಅಲ್ಲಮಪ್ರಭುವನ್ನು ಅರಸುತ್ತ, 'ಕಲ್ಯಾಣಪಟ್ಟಣಕ್ಕೆ' ಆಗಮಿಸಿದಳು ಅಕ್ಕಮಹಾದೇವಿ.

೨. ಅನುಭವ ಮಂಟಪದಲ್ಲಿ

ಅಕ್ಕಮಹಾದೇವಿ ಅಲ್ಲಮಪ್ರಭುವನ್ನು ಕಾಣಬೇಕೆಂಬ ತವಕದಿಂದ ಕಲ್ಯಾಣದ ಕಡೆಗೆ ಧಾವಿಸುತ್ತಿದ್ದಂತೆಯೆ ಇತ್ತ ಕಲ್ಯಾಣದಲ್ಲಿ ಘಟ್ಟಿವಾಳಯ್ಯಗಳು ನಿರ್ಮಯಲ ಸಮಾಧಿಯನೆಯ್ದಲು ಪ್ರಭುದೇವರೆ ಮೊದಲ್ಗೊಂಡು ಅಸಂಖ್ಯಾತ ಮಹಾಗಣಂಗಳು ಹರುಷಾನಂದ ಶರಧಿಯಲ್ಲಿ ತೇಂಕಾಡುತ್ತ ಮಹಾನುಭಾವಗೋಷ್ಠಿಯಲ್ಲಿರುವರು. ಆಗ ಅವಳ ಬರುವಿಕೆಯನ್ನು ಬಸವರಾಜದೇವರು ಅರಿದು ತನ್ನ ಹೆತ್ತ ತಾಯಿ ಅಕ್ಕ ಮಹಾದೇವಿಯರು ಪರಮ ವಿರಕ್ತಿಯಿಂದ ದಿಗಂಬರೆಯಾಗಿ, ಕಾಮಾರಿಯಾಗಿ ಬರುತ್ತಿರುವುದಾಗಿ ತಿಳಿಸುತ್ತಾರೆ. ಪ್ರಭು ಅವಳ ಸ್ಥಿತಿಗತಿಯನ್ನು ಕಂಡರಿದವನಾಗಿದ್ದರೂ ಸಕಲ ಪ್ರಮಥರಿಗೆ ಆಕೆಯ ಸ್ವರೂಪವನ್ನು ಪ್ರತ್ಯಕ್ಷ ತೋರಿಸಬೇಕೆಂಬ ಉದ್ದೇಶದಿಂದ ಕಲ್ಯಾಣದ ಹೊರವಲಯದಿಂದಲೆ ಪರೀಕ್ಷೆ ಮಾಡುತ್ತ ಬರಮಾಡಿಕೊಳ್ಳುತ್ತಾನೆ.

ಕಲ್ಯಾಣಪಟ್ಟಣ ಪ್ರವೇಶ

ಆಗ ಪ್ರಭುವಿನ ಆದೇಶದಂತೆ ಪರಮಜ್ಞಾನಿಯಾದ ಕಿನ್ನರಯ್ಯ ಕಲ್ಯಾಣ ಪಟ್ಟಣದ ಹೊರವಲಯಕ್ಕೆ ಬರುತ್ತಾನೆ.[5] ಮಹಾದೇವಿಯಕ್ಕನನ್ನು ಸಂಧಿಸುತ್ತಾನೆ. ಮತ್ತು ಅವಳನ್ನು ಒರೆದು ನೋಡುತ್ತಾನೆ.

ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು
ಏತಱಿಮನ? ಇದೇತಱ ನಿರ್ವಾಣ? ಮಹಾಲಿಂಗ
ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ
ಸಜ್ಜನೆಯೆಂದು ಕೈವಿಡಿದವನಲ್ಲ ಕೇಳಾ ಮರುಳೆ

ಎಂದು ಮಹಾದೇವಿಯನ್ನು–ಕೌಶಿಕನನ್ನು ತಿರಸ್ಕರಿಸಿ ಪ್ರಪಂಚದ ಹಂಗು ದೊರೆದು ದಿಗಂಬರೆಯಾಗಿದ್ದರೂ - ಸಂಸಾರಿಯೆಂದು ಕರೆಯುತ್ತಾನೆ ಕಿನ್ನರಯ್ಯ. ಆದರೆ ಅಂತರಂಗದ ಜ್ಞಾನಾಗ್ನಿಯಿಂದ ಕಾಮನನ್ನು ಸುಟ್ಟುರುಹಿದವಳು ಮಹಾದೇವಿ. ಆಕೆ ಅಂಗದ ಭಂಗವ ಲಿಂಗ ಸುಖದಿಂದ ಗೆಲಿದಿದ್ದಾಳೆ. ಮನದ ಭಂಗವ ಅಱುಹಿನ ಮುಖದಿಂದ ಗೆಲಿದಿದ್ದಾಳೆ. ಜೀವದ ಭಂಗವ ಶಿವಾನುಭಾವದಿಂದ ಗೆಲಿದಿದ್ದಾಳೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದಿದ್ದಾಳೆ. ಜವ್ವನದ ಹೊಱಮಿಂಚಿನಲ್ಲಿ ಕಣ್ಣಿಗೆ ತೋಱುವ ಕಾಮನ ಸುಟ್ಟುರುಹಿದ ಭಸ್ಮವನ್ನು ಲೇಪಿಸಿಕೊಂಡಿದ್ದಾಳೆ. ಚೆನ್ನಮಲ್ಲಿಕಾರ್ಜುನನು ಕಾಮನನ್ನು ಕೊಂದು ಮನಸಿಜನನ್ನಾಗಿಯಾದರೂ ಉಳುಹಿದರೆ ತಾನು ಅವನ ತಲೆಯ ಬರಹವನ್ನೇ ತೊಡೆದಿದ್ದಾಳೆ.[2] ಆದ್ದರಿಂದಲೆ ಆಕೆಗೆ ಕಿನ್ನರನಂತಪ್ಪವರು ಸಹೋದರರು. ಏಳೇಳು ಜನ್ಮಗಳಲ್ಲಿ ಶಿವಭಕ್ತರೆ ಬಂಧುಗಳು. ಚೆನ್ನ

ಮಲ್ಲಿಕಾರ್ಜುನನೇ ಗಂಡನು. ಹೀಗಿರುವುದರಿಂದ ಆಕೆಗಿಂತ 'ಪುಣ್ಯಂಗೆಯ್ದವರಾರು'? 'ಭಾಗ್ಯಂಗೆಯ್ದವರಾರು'?

ಅವಳ ಈ ದಿವ್ಯಸ್ವರೂಪವನ್ನು ಕಂಡಾಗ ಕಿನ್ನರಯ್ಯ ನಲ್ಲಿ ಮಾತೇ ಹೊರಡುವುದಿಲ್ಲ; ಮಂತ್ರಮುಗ್ಧನಾಗಿ, ತುಷ್ಟ ಹೃದಯನಾಗಿ, ಆವಳಿಂದ ಬೀಳ್ಕೊಂಡು ಹೊರಟು ಹೋಗು ತ್ತಾನೆ.

ಮಹಾದೇವಿ ನಿಧಾನವಾಗಿ ಕಲ್ಯಾಣವನ್ನು ಹತ್ತಿಸಾರು ತ್ತಾಳೆ. ಅದರ ಪ್ರವೇಶ ಅಷ್ಟು ಸುಲಭವಲ್ಲ. 'ಕಲ್ಯಾಣ ವೆಂಬುದನಾರಿಗೆಯು ಹೋಗಬಾರದು. ಅಸಾಧ್ಯ''ಆಸೆಯಾಮಿಷ ವನಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು. ಒಳ ಹೊಱಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೋಗಬಾರದು. ನಾನೆಂಬುದ ಹಱಿದವಂಗಲ್ಲದೆ ಕಲ್ಯಾಣವ ಹೋಗಬಾರದು! ಆದರೆ ಅಕ್ಕ 'ಒಳಗು ತಿಳಿದು, ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆಯಳಿದಿದ್ದಾಳೆ.' ಅಂತೆಯೆ ಆ ಕಲ್ಯಾಣವನ್ನು ಕಂಡು ಹರ್ಷಿತಳಾಗಿದ್ದಾಳೆ. 'ನಮೋ ನಮೋ' ಎನ್ನುತ್ತ ಪ್ರವೇಶಿಸುತ್ತಾಳೆ. ಲಕ್ಷದ ಮೇಲೆ ತೊಂಭತ್ತಾರು ಸಾವಿರ ಮಹಂತರು ಸುತ್ತಿಸುಳಿದ ಪಟ್ಟಣವಲ್ಲವೆ ಕಲ್ಯಾಣ ನಗರ. ಅಂದಮೇಲೆ ಮಹಾದೇವಿಯಕ್ಕನಿಗೆ ಹಾಗೆ ಕಂಡುದರಲ್ಲಿ ಅಚ್ಚರಿಯೇನಿದೆ.?

ಕಣ್ಣರಿಯದಿದ್ದರೂ ಕರುಳರಿಯುತ್ತದೆ, ಹೃದಯ ಹೃದಯದೊಡನೆ ಮಾತಾಡುತ್ತದೆ. ಈ ಮಾತು ಇಲ್ಲಿ ನಿಜ

ವನ್ನಿಟ್ಟಿದ್ದಾಳೆ. ಅಲ್ಲಿ ಬಸವಣ್ಣ ತನ್ನ ಹೆತ್ತತಾಯಿ ಮಹಾದೇವಿಯಕ್ಕ ಬರುತ್ತಿದ್ದಾಳೆಂದು ಪ್ರಭುದೇವರೆ ಮೊದಲಾದ ಪ್ರಮಥರಿಗೆ ಪರಿಚಯ ಮಾಡಿಕೊಡುತ್ತಿರುವಾಗ ಮಹಾದೇವಿ 'ಅಯ್ಯಾ, ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ. ಅಯ್ಯಾ, ನಿಮ್ಮ ಶರಣರು ಇದ್ದ ಪುರವೆ ಕೈಲಾಸಪುರವಯ್ಯಾ. ಅಯ್ಯಾ, ನಿಮ್ಮ ಶರಣರು ನಿಂದುದೆ ನಿಜನಿವಾಸವಯ್ಯಾ. ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರ ಎಂದು ಕೊಂಡಾಡುತ್ತಾಳೆ. 'ಬಸವಣ್ಣನ ಶ್ರೀಪಾದಕ್ಕೆ' ಅಲ್ಲಿಂದಲೆ 'ನಮೋ ನಮೋ' ಎನ್ನುತ್ತಾಳೆ; ಮುಂದಡಿ ಇಡುತ್ತಾಳೆ.

ಅ. ಮಹಾಮನೆಯಲ್ಲಿ: ಪ್ರಥಮದಿನ

೧. ಅಕ್ಕ ಬಸವಣ್ಣನನ್ನು ವಂದಿಸಿದ್ದು

ಬಸವಣ್ಣನವರ ಮಹಾಮನೆ. ಪ್ರಭುದೇವರು, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವರೆ ಮೊದಲಾದ ಮಹಾಂತರೊಡನೆ ಅಣ್ಣ ಅನುಭಾವಗೋಷ್ಠಿಯಲ್ಲಿದ್ದಾನೆ. ಅವನನ್ನು ಕಾಣಬೇಕೆಂಬ ಅಕ್ಕನ ಹಂಬಲ ಇಂದು ಪೂರ್ಣಗೊಂಡಿದೆ. ಹಲವ ಹಂಬಲಿಸಿ ಹಾತೊರೆದು ಬಂದು ಪ್ರತ್ಯಕ್ಷದಲ್ಲಿ ಕಂಡಾಗ ಅವನನ್ನು ಹೊಗಳುವುದಕ್ಕೆ ಅವಳಲ್ಲಿ ಶಬ್ದಗಳೇ ಇಲ್ಲ. ಮಂತ್ರಮುಗ್ಧಳಾಗಿದ್ದಾಳೆ. ತಾನು ಸ್ವತಂತ್ರಳೆ?

'ಅಜಿಸಿ ತೊಳಲಿದರಿಲ್ಲ. ಹರಸಿ ಬಳಲಿದರಿಲ್ಲ. ಬಯಸಿ ಹೊಕ್ಕರಿಲ್ಲ. ತಪಸು ಮಾಡಿದರಿಲ್ಲ. ಅದು ತನ್ನ ಅಹಕಾಲಕ್ಕೆ

ಲ್ಲದೆ ಸಾಧ್ಯವಾಗದು. ಶಿವನೊಲಿವಲ್ಲದೆ ಕೈಗೂಡದು.' ಹೀಗಿದ್ದರೂ 'ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ' ತಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನೆನ್ನುತ್ತಾಳೆ. 'ಸಜ್ಜನ ಸದಾಚಾರವ ಕಂಡುದರಿಂದ ಅವಳ ಕಂಗಳ ತಮಂಪಟಲ ಹರಿಯುತ್ತದೆ. ಸಜ್ಜನ ಸದ್ಭಾವರ ಶ್ರೀ ಚರಣಕ್ಕೆರಗುವುದರಿಂದ ಹಣೆಯ ಲಿಖಿತ ತೊಡೆಯುತ್ತದೆ. ಆದ್ದರಿಂದ ಶರಣ ಸಂಗನ ಬಸವಣ್ಣನ ಪಾದವನ್ನು ಕಂಡು ನಮೋ ನಮೋ ಎನ್ನುತ್ತಾಳೆ.

೨. ಅಣ್ಣನಿಂದ ಮಹಾದೇವಿಯ ಪರಿಚಯ :

ಈಗ ಅಕ್ಕ ಎಲ್ಲರ ಪ್ರತ್ಯಕ್ಷದಲ್ಲಿದ್ದಾಳೆ. ಎಲ್ಲ ಮಹಾತ್ಮರಿಗೂ ನಮಸ್ಕರಿಸಿ ನಿಂತಿದ್ದಾಳೆ. ಅತಿಥಿದೇವೋಭವ. ಅವಳ ಪರಿಚಯವನ್ನು ಎಲ್ಲರಿಗೂ ಮಾಡಿಕೊಡುತ್ತಾನೆ ಮಹಾಮನೆಯ ಮಹಾನುಭಾವ. ಅವನ ದೃಷ್ಟಿಯಲ್ಲಿ ಅವಳು 'ಕಾಯದ ಲಜ್ಜೆಯ ಕಲ್ಪಿತವ ಕಳೆ'ದಿದ್ದಾಳೆ. 'ಜೀವದ ಲಜ್ಜೆಯ ಮೋಹವನಳಿ'ದಿದ್ದಾಳೆ. 'ಮನದ ಲಜ್ಜೆಯ ನೆನಹ ಸುಟ್ಟಿ'ದ್ದಾಳೆ. 'ಭಾವದ ಕೂಟ ಬತ್ತಲೆಯೆಂಡಜು'ದಿದ್ದಾಳೆ. ಇಂತಹ 'ಎನ್ನ ಹೆತ್ತತಾಯಿ ಮಹಾದೇವಿಯಕ್ಕನ ನಿಲವ ನೋಡೆಂ'ದು ಪ್ರಭುವೆ ಮೊದಲಾದವರಿಗೆ ಅರುಹುತ್ತಾನೆ. ಮತ್ತು ಅವಳ ದಿಗಂಬರತ್ವದ ಸ್ವರೂಪವನ್ನು ಬಣ್ಣಿಸುತ್ತಾನೆ.

ರೂಹಿಲ್ಲದವಂಗೆ ಒಲಿದವರಿಂಗೆ ತನುವಿನ ಹಂಗುಂಟೆ?
ಮನವಿಲ್ಲದವಂಗೆ ಮೆಚ್ಚಿದವರಿಗೆ ಅಭಿಮಾನದ ಹಂಗುಂಟೆ ?
ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ?

ಕೂಡಲ ಸಂಗಮದೇವಯ್ಯಾ, ಮಹಾದೇವಿಯಕ್ಕನೆಂಬ
ಭಕ್ತಿಗೆ ಅವ ಹೋಲಿಕೆಯೂ ಇಲ್ಲ ನೋಡಾ ಪ್ರಭುವೆ'

ಬಸವಣ್ಣ ಮಾಡಿಕೊಟ್ಟ ಅಕ್ಕನ ಪರಿಚಯ ಪ್ರಭುವಿಗೆ ಇಲ್ಲದಿಲ್ಲ. ಆದರೂ ಅಕ್ಕನನ್ನು 'ಅನುಭಾವ ಸುಖಮುಖ' ದಿಂದ ನುಡಿಸುತ್ತಾನೆ. ಇಲ್ಲಿಂದ ಅವಳ ಪರೀಕ್ಷೆ ಆರಂಭವಾಗುತ್ತದೆ.

೩. ಅಕ್ಕನಿಗೆ ಪತಿಯ ಕುರುಹು ಕೇಳಿದ್ದು

'ಉದಮದದ ಯೌವನವನೊಳಗೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ ಸತಿಯೆಂದರೆ ಮುನಿವರು ನಮ್ಮ ಶರಣರು. ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರು. ಅಲ್ಲದಿರೆ ತೊಲಗು ತಾಯೆ. ನಮ್ಮ ಗುಹೇಶ್ವರನ ಶರಣರಲ್ಲಿ ಸಂಗ ಸುಖ ಸನ್ನಿಹಿತವ ಬಯಸುವರೆ, ನಿನ್ನ ಪತಿಯಾರೆಂಬುದ ಹೇಳಾ ಎಲೆ ಅವ್ವಾ'.

ಮಹಾದೇವಿ ಈಗ ಷೋಡಶವರ್ಷದ ಯೌವನೆ. ಆ ಯೌವನಕ್ಕೆ ತಕ್ಕ ರೂಪು. ಇಂತಹ ರೂಪು ಯೌವನವನೊಳಗೊಂಡ ಸತಿ ಎಂದರೆ ಶರಣರು ಸಿಟ್ಟಿಗೇಳುತ್ತಾರೆ. ಅವಳು ಶರಣರ ಸಹವಾಸವನ್ನು ಬಯಸುವುದಾದರೆ ತನ್ನ ಗಂಡನ ಕುರುಹನ್ನು ಹೇಳಬೇಕು; ಬಂದು ಕುಳಿತುಕೊಳ್ಳಬೇಕು. ಇಲ್ಲವಾದರೆ ಇಲ್ಲಿಂದ ತೊಲಗಬೇಕು. ಏಕೆಂದರೆ 'ಕಾಯ ಸತಿಯೆಂದು ಹೇಸಿ ಕಳೆದೆ. ಮಾಯದ ಮನ ಮಾಯೆಯೆಂದು ಹೇಸಿ ಬಿಟ್ಟೆ. ಮಾಯದ ಸತಿಯೆಂಬ ಸಂದೇಹವೆಮಗೇಕೆ? ಸತಿಯರ ಗೋಷ್ಠಿ

ವಿಪಕ್ಷಾಣವ್ವಾ, ಗೊಹೇಶ್ವರಲಿಂಗದಲ್ಲಿ ನಿನ್ನ ಪತಿಯ ಕುರುಹ
ಹೇಳಾ ಎಲೆ ಅವ್ವಾ.'

ಇಲ್ಲಿ ಖಡಾಖಂಡಿತವಾಗಿ ಪ್ರಭುವು ಅಕ್ಕನಿಗೆ ಗಂಡನ ಕುರುಹು ಹೇಳುವುದಕ್ಕೆ ಕೇಳುತ್ತಾನೆ. ಹಾಗೆ ಹೇಳಲು ಸಾಧ್ಯ ವಿಲ್ಲದಿದ್ದರೆ ತೊಲಗು ಎನ್ನುತ್ತಾನೆ.

ಇದರಿಂದ ಅನುಭವ ಮಂಟಪದಲ್ಲಿ ಮದುವೆಯಾಗದ ಹೆಣ್ಣುಮಕ್ಕಳಿಗೆ ಪ್ರವೇಶವಿಲ್ಲವೆನ್ನುವಂತೆ ಭಾಸವಾಗುತ್ತದೆ. ಸ್ತ್ರೀ-ಪುರುಷರೆನ್ನದೆ. ಮೇಲು ಕೀಳೆನ್ನದೆ, ಬಡವ ಬಲ್ಲಿದರೆನ್ನದೆ, ಎಲ್ಲರಿಗೂ ಅನುಭಾವ ಗೋಷ್ಠಿಯಲ್ಲಿ ಭಾಗವಹಿಸಲು ಅವಕಾಶ ವಿರುವಾಗ ಈ ನಿರ್ಬಂಧ ಅಕ್ಕನಿಗೆ ಏಕೆ ಬಂದಿತು? ಈ ಪ್ರಶ್ನೆಗೆ ಉತ್ತರವನ್ನು ಸಿದ್ಧವೀರಣ್ಣೊಡೆಯರಾಗಲಿ, ಮುಂದಿನ ವಿದ್ವಾಂಸರಾಗಲಿ ಹುಡುಕ ಹೊರಟಂತಿಲ್ಲ. ಶರಣಸತಿ; ಲಿಂಗಪತಿ ಯೆಂದು ಒಪ್ಪಿಕೊಂಡವರು ಈ ನಿರ್ಬಂಧವನ್ನು ಹಾಕಬಾರ ದಿತ್ತೆನೋ ಎನಿಸುತ್ತದೆ.

ಆದರೆ ಮಹಾದೇವಿಯಕ್ಕ ಕೇವಲ ಅವಿವಾಹಿತ ಸ್ತ್ರೀ ಯಾಗಿದ್ದರೆ ಈ ಮಾತನ್ನು ಕೇಳುತ್ತಿರಲಿಲ್ಲವೇನೊ! ಈಗ ಆಕೆ ಬಂದಿರುವುದು ಕೌಶಿಕನನ್ನು ತಿರಸ್ಕರಿಸಿ ದಿಗಂಬರೆಯಾಗಿ. ಹೀಗೆ ದಿಗಂಬರೆಯಾಗಿ ಬಂದ ಅಕ್ಕನಿಗೆ ಯಾವ ನಿರ್ಬಂಧವನ್ನು ಹಾಕದೆ ಹೋಗಿದ್ದರೆ–ಅಲ್ಲಮಪ್ರಭು, ಬಸವಣ್ಣನಂತಹರಿಗೆ ಅಕ್ಕನ ಆಧ್ಯಾತ್ಮಿಕ ಔನ್ನತ್ಯದ ಅರಿವಿದ್ದರೂ ಸ್ವೇಚ್ಛಾವೃತ್ತಿ ಸಮಾಜದಲ್ಲಿ ಬೆಳೆಯಬಹುದೆಂಬ ಭಯವೂ ಅವರಿಗೆ ಇದ್ದಂತಿದೆ. ಆದ್ದರಿಂದಲೆ ಅವಳನ್ನು ಅರೆದು, ಒರೆದು ನೋಡುತ್ತಾರೆ.

ಅವಳು ನಿರ್ಲಿಪ್ತ, ನಿಸ್ಸಂಗಿ, ನಿರ್ಮೋಹಿಯೆಂಬುದನ್ನು ಜಗತ್ತಿಗೆ ಸಾರಿಹೇಳುತ್ತಾರೆ. ಇದು ಅವಳ ದಿವ್ಯವ್ಯಕ್ತಿತ್ವವನ್ನು ಪ್ರದರ್ಶಿಸುವುದರ ಜೊತೆಗೆ ಸಮಾಜದ ಸ್ವಾಸ್ಥ್ಯವನ್ನೂ ಕಾಯ್ದುಕೊಳ್ಳುವುದರಲ್ಲಿ ಸಹಾಯಕಾರಿಯಾಗುವುದೆಂಬುದರಲ್ಲಿ ಯಾವ ಸಂದೇಹವೂ ಇದ್ದಂತಿಲ್ಲ.

ಅಕ್ಕ ನಿಜವಾಗಿಯೂ ಲಿಂಗಸಂಗಿ, ತನ್ನ ಗಂಡನ ಕುರುಹನ್ನು, ಮದುವೆಯಾದ ವಿಧಾನವನ್ನು ತನ್ನ ಬಂಧು-ಬಳಗವನ್ನು ಆ ತೆರನಾಗಿಯೇ ಹೇಳುತ್ತಾಳೆ. 'ಹರನೆ, ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದಾಳೆ. ಅವಳ ತಪಸ್ಸಿಗೆ ಲಿಂಗದೇವ ಮೆಚ್ಚಿದ್ದಾನೆ. ವಿಧಿವತ್ತಾಗಿ ಮದುವೆ ನಡೆಯುತ್ತದೆ.

> 'ಗುರುವೆ ತೆತ್ತಿಗನಾದ. ಲಿಂಗವೆ ಮದುವಳಿಗನಾದ. ನಾನೆ ಮದುವಳಿಗೆಯಾದೆನು. ಈ ಭುವನವೆಲ್ಲವರಿಯಲು
> ಅಸಂಖ್ಯಾತರೆನಗೆ ತಾಯಿ ತಂದೆಗಳು. ಕೊಟ್ಟರು ಪ್ರಭುವಿನ ಮನೆಗೆ–ಸಾದೃಶ್ಯವಪ್ಪವರನ ನೋಡಿ. ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ. ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೆ.'

ಹೀಗಿರುವುದರಿಂದ ಮಲ್ಲಿಕಾರ್ಜುನನೆ ಗಂಡನು. ಮಿಕ್ಕಿನ ಲೋಕದ ಗಂಡರು ಅವಳಿಗೆ ಸಂಬಂಧವಿಲ್ಲ.

ಅಕ್ಕನ ಮದುವೆ ನಡೆದುದು ವೈಭವಪೂರ್ಣವಾಗಿ, ಪಚ್ಚೆಯ ನೆಲೆಗಟ್ಟು, ಕನಕದ ತೋರಣ, ವಜ್ರದ ಕಂಬ, ಪವಳದ ಚಪ್ಪರವಿಕ್ಕಿ, ಕಂಕಣ ಕೈದಾರ, ಸ್ಥಿರಸೇಸೆಯನಿಕ್ಕಿ ಚೆನ್ನ

ಮಲ್ಲಿಕಾರ್ಜುನನೊಡನೆ ಮದುವೆ ಮಾಡುತ್ತಾರೆ.' ಅಲ್ಲಿ 'ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿದ್ದಾರೆ. ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಶರಣಸತಿ ಲಿಂಗಪತಿತ್ವವಿಲ್ಲಿದೆ. ಕಾಲಿಲ್ಲದ ಹೆಂಡತಿ, ಭಿನ್ನಕ್ರಿಯೆಯಿಲ್ಲದ ಶರಣ ಸತಿ, ತಲೆಯಿಲ್ಲದ ಗಂಡ, ಭಿನ್ನಜ್ಞಾನವಿಲ್ಲದ ಲಿಂಗಪತಿ. ಇದು 'ಎಂದೆಂದೂ ಬಿಡದ ಬಾಳುವೆ.' ಹಿಂದೆ ಇದ್ದ ಬಾಳುವೆ, ಇಂದು ಇದ್ದ ಬಾಳುವೆ, ಮುಂದೆಯೂ ಇರುವ ಬಾಳುವೆ.

೪. ದಿಗಂಬರತ್ವ

ಈ ಉತ್ತರದಿಂದ ಪ್ರಭು ಸಂತುಷ್ಟನಾದರೂ ಉಡುತಡಿಯ ಪ್ರಸಂಗವನ್ನು ಎತ್ತಿ ಮತ್ತೆ ಕೇಳುತ್ತಾನೆ. 'ತಪ್ಪ ಹೊರಿಸಿ ಹೊರಟಿಹೆನೆಂಬುದು ಸತ್ಯವೆ?' ಈ ಪ್ರಶ್ನೆಗೆ ಅಕ್ಕನಿಂದ ಉತ್ತರ ವಿಲ್ಲ. ಒಂದು ವೇಳೆ ಕೌಶಿಕನು ಲಿಂಗಧಾರಿಯಾಗಿ ಶಿವಭಕ್ತ ನಾಗಿದ್ದರೆ ಅವಳಿಗೆ ಈ ಪ್ರಸಂಗವೇ ಬರುತ್ತಿರಲಿಲ್ಲ. ತನ್ನ ಕೊಟ್ಟ ಭಾಷೆ ಪೂರ್ಣವಾಗುತ್ತಿತ್ತು. ಶಿವನಿಗಿಂತಲೂ ಶಿವಭಕ್ತರೇ ಶ್ರೇಷ್ಠರಾದುದರಿಂದ ಕೌಶಿಕನಲ್ಲಿಯೇ ಮಲ್ಲಿಕಾರ್ಜುನನನ್ನು ಕಲ್ಪಿಸಿ ನಿಶ್ಚಿಂತಳಾಗಿರುತ್ತಿದ್ದಳು. ಹಾಗಾಗದೆ ಇರುವುದರಿಂದ ಭವಿಯ ಸಂಗವನ್ನು ತಿರಸ್ಕರಿಸಿ; ಅವನ ಹಂಗೂ ಬೇಡವೆಂದು, ನೂಲ ಎಳೆಯನ್ನು ಹರಿದೊಗೆದು ದಿಗಂಬರೆಯಾಗಿ ಮಲ್ಲಿಕಾರ್ಜುನನನ್ನು ಕೂಡಲು ಧಾವಿಸಿದ್ದಾಳೆ. ಇದನ್ನೆಲ್ಲ ವಿವರಿಸಿ ಹೇಳಲು ಅವ ಳಿಗೆ ಮನಸ್ಸಿಲ್ಲ. ಏಕೆಂದರೆ ಅವಳು ಕೈಕೊಂಡ ಆಧ್ಯಾತ್ಮ ಜೀವನಕ್ಕೆ ಆ ಕಥೆಯಿಂದ ಪ್ರಯೋಜನ ಆಕೆಗೆ ಕಾಣದು.

೫. ಕೇಶದ ಮರೆ

ಹೀಗೆ ಲಿಂಗಸುಗಿಯಾಗಲೊಪ್ಪದ ಕೌಶಿಕನ ಹಂಗು ಹಿಂಗಬೇಕೆಂದು 'ತನು ಸೀರೆಯನುಳಿದು ನಿರ್ವಾಣವಾದರೂ ಮನದ ಭ್ರಾಂತು ನಿಶ್ಚಯವಾಗದು.' ಅಂಗದ ಮೇಲಿನ ಮೋಹ ಇನ್ನೂ ಉಳಿದುಕೊಂಡಿದೆ. 'ಕೇಶವೆಂಬ ಸೀರೆ ಅಂಗಕ್ಕೆ ಮರೆಯಾಯಿತ್ತು. ಅಪಮಾನವೆಂತು ಹಱಿಯಿತ್ತು?' ಒಂದು ವೇಳೆ ದೇವರು ತನ್ನನ್ನು ಒಲಿದಿದ್ದು ತಾನು ದೇವರನ್ನು ಒಲಿದಿರುವಳು ಎಂಬುದಾದರೂ ಹೇಗೆ ಸಾಧ್ಯ? ಭಾವಶುದ್ಧ ವಾದಲ್ಲಿ ಸೀರೆಯನುಳಿದು ಕೂದಲ ಮಱಿಸಲೇತಕ್ಕೆ? ಅದು ಅಂತರಂಗದ ನಾಚಿಕೆ ಬಾಹ್ಯದಲ್ಲಿ ತೋಱಿತ್ತು, ಆದ್ದರಿಂದ ಇಂತಹ ಡಾಂಬಿಕವೇಷ ಗೊಹೇಶ್ವರಲಿಂಗಕ್ಕೆ ಸಲ್ಲದು. ಪ್ರಭುವಿನ ಈ ಪ್ರಶ್ನೆಗೆ ಸಾಮಾನ್ಯರು ದಿಕ್ಕುತೋಚದೆ ಕಕ್ಕಾವಿಕ್ಕಿಯಾಗಬಹುದಾದರೂ ಅಕ್ಕ ತಕ್ಷಣವೇ ತಕ್ಕ ಉತ್ತರವನ್ನೀಯುತ್ತಾಳೆ.

ಪಾಂಚಭೌತಿಕವಾದ ಈ ಕಾಯ ಅಶಾಶ್ವತ; ಅನಿಶ್ಚಿತ. ದೇವರನ್ನು ಒಲಿಸುವುದಕ್ಕೆ ಇದೊಂದು ಸಾಧನ ಮಾತ್ರ. 'ಅಂತರಂಗ ಶುದ್ಧವಾಗಿ' 'ಚೆನ್ನಮಲ್ಲಿಕಾರ್ಜುನ ಲಿಂಗವು ಒಲಿದ' 'ಕಾಯ ಕಱ್ರನೆ ಕಂದಿದರೇನಯ್ಯಾ? ಮಿಱ್ರನೆ ಮಿಂಚಿದರೇನಯ್ಯಾ?' ಅದರಿಂದ ಲಾಭ ಹಾನಿಗಳೆರಡೂ ಇಲ್ಲ. ಆದರೂ 'ಕಾಮನ ಮುದ್ರೆಯ ಕಂಡು ನಿಮಗೆ ನೋವಾಯಿತ್ತೆಂದು, ಆ ಭಾವದಿಂದ ಮುಚ್ಚಿದೆ. 'ಫಳ ಒಳಗೆ ಪಕ್ವವಾಗಿದೆಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು'. ಕಾಡದಿರಣ್ಣಾ, ಚೆನ್ನಮಲ್ಲಿಕಾರ್ಜುನ

ದೇವರ ದೇವನ ಒಳಗಾದವಳಾ.' ಇದೂ ಅಲ್ಲದೇ 'ನಾಳ ಮರೆಯ ನೂಲು ಸಡಿಲಿ ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿ.' ಇದು ಹೊರ ಜಗತ್ತಿನಲ್ಲಿ ನಡೆಯುವ ವಿಷಯ. ಆದರೆ ಅಕ್ಕ ಈಗ ಬಾಹ್ಯಕ್ಕೆ ಸೀಮಿತವಾಗಿಲ್ಲ. 'ಪ್ರಾಣ ದೊಡೆಯ ಜಗದೊಳಗೆ ಮುಳುಗುತ್ತ ತೆರಹಿಲ್ಲದಿರಲು, ದೇವರ ಮುಂದೆ ನಾಚಲೆಡೆಯುಂಟೆ?' ಎಂದಿಗೂ ಇಲ್ಲವೆಂದೇ ಹೇಳ ಬೇಕಾಗುತ್ತದೆ. ಚೆನ್ನಮಲ್ಲಿಕಾರ್ಜುನಂಗೆ ಜಗವೆಲ್ಲ ಕಣ್ಣು' ಹೀಗಿರುವಾಗ ಅವನ ನೋಟವನ್ನು 'ಮುಚ್ಚಿ ಮರೆಸುವುದ ಹೇಳಯ್ಯಾ?' ಇದು ಅಕ್ಕನ ಒಳ-ಹೊರಗು ಒಂದಾದ ಸ್ಥಿತಿ ಯಲ್ಲದೆ ಇನ್ನೇನು?

ಅಕ್ಕ ದಿಗಂಬರೆಯಾಗಿ ಹೋದಳೆಂಬುದನ್ನು ಒಪ್ಪದ ಆಧುನಿಕ ಕೆಲ ವಿದ್ವಾಂಸರು ಗುರುಗಳಿಂದ ನಾರುಡೆಯನ್ನು ಉಡಿಸಿ ಕಳಿಸಿರುವುದುಂಟು. ಇದು ಸಮಂಜಸವಾದುದಲ್ಲ. ಅಕ್ಕ ಬತ್ತಲೆಯಾಗಿ ಹೋದುದೇ ಸತ್ಯ. ಇದು ವೈರಾಗ್ಯದ ಕೊನೆಯ ಹಂತ. ಒಂದು ಕೈಯಿಂದ ಸೀರೆಯನ್ನು ಹಿಡಿದು ಕರೆದಾಗ ದ್ರೌಪದಿಯ ಕೂಗು ಕೃಷ್ಣನಿಗೆ ಮುಟ್ಟದೆ, ಎರಡೂ ಕೈಗಳನ್ನು ಬಿಟ್ಟು ಒರಲಿದಾಗ ಕೇಳಿಸಿತೆನ್ನುವುದು ಪ್ರಸಿದ್ಧವಾಗಿಯೇ ಇದೆ. ಅದರಂತೆ ದಿಗಂಬರತ್ವವು ಎಂತಹ ಪರಿಣಾಮ ಬೀರುತ್ತದೆನ್ನು ವುದಕ್ಕೆ ವೇಮನನ ಉದಾಹರಣೆಯು ಜೀವಂತವಾಗಿಯೇ ಇದೆ. ಇದೂ ಅಲ್ಲದೆ ಕೌಶಿಕ ಜೈನಮತೀಯನಾದುದರಿಂದ ದಿಗಂಬರ ತ್ವವು ಅವನಿಗೆ ಪೂಜ್ಯ. ಅಲ್ಲಿ ಕಾಮವಿಕಾರವಿಲ್ಲ. ವ್ಯವಹಾರ

ಚತುರೆಯಾದ ಅಕ್ಕ ಈ ಯುಕ್ತಿಯಿಂದ ಅಲ್ಲಿಂದ ಪಾರಾಗಿರುವುದು ಹೆಚ್ಚು ಸಂಭವನೀಯ.

ಅಕ್ಕನ ಉತ್ತರ ಎಲ್ಲರ ತಲೆದೂಗಿಸಿರುವುದರಲ್ಲಿ ಸಂದೇಹವಿಲ್ಲ. ಅವಳ ದಿಗಂಬರತ್ವವಾಗಲಿ, ಕೇಶದ ಮರೆಯಾಗಲಿ ಅವಳಿಗೆ ಸಂಬಂಧಿಸಿದವುಗಳಲ್ಲ. ದಿಗಂಬರತ್ವವು ಪುರುಷಕುಲಕೋಟಿಯನ್ನೇ ಒಂದು ರೀತಿಯಿಂದ ಮೂದಲಿಸುತ್ತಿದ್ದು ನಿಕೃಷ್ಟತೆಯನ್ನು ಎತ್ತಿ ತೋರಿಸಿ ಇದು ಪುರುಷ ಪೌರುಷದ ಪ್ರತೀಕವೆಂದು ಪರಿಹಾಸ್ಯ ಮಾಡುವಂತಿದೆ. ಕಾಮಾರಿಯೇನೋ ಕಾಮನನ್ನು ಸುಟ್ಟುರುಹಿ ಭಸ್ಮಲೇಪಿಯಾದರೂ ವೇಷಧಾರಿಗಳೆಲ್ಲರಿಗೂ ಈ ವ್ಯಕ್ತಿತ್ವವಿರುವುದು ಸಾಧ್ಯವೆ? ಕಾಮನ ಕುರುಹು ಕಂಡಾಗ ಕಾಮ ಪ್ರಚೋದನೆಗೊಳಗಾಗುವುದು ಸಹಜ. ಹಾಗಾಗಬಾರದೆಂಬುದು ಅಕ್ಕನ ಭಾವನೆ. ಅಂತೆಯೇ ಕೇಶ ಮರೆಮಾಡಿಕೊಂಡಿದ್ದಾಳೆ.

೬. ದೇಹದ ಗುಣಧರ್ಮ :

ಅಕ್ಕ ಕೊಟ್ಟ ದಿಗಂಬರತ್ವದ ಮತ್ತು ಕೇಶದ ಮರೆಯ ಉತ್ತರ ಪ್ರಭುವಿಗೆ ಸಮ್ಮತವಾಗಿದೆ. 'ಫಳ ಪಕ್ವವಾಗಿಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು' ಎನ್ನುವ ಒಂದು ಮಾತನ್ನೇ ಹಿಡಿದುಕೊಂಡು ಆತ 'ನೀ ದೇವರೊಳಗೊ? ದೇವರು ನಿನ್ನೊಳಗೊ? ಎಂಬ ಠಾವನರಿಯೆ. ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಯಿತ್ತು. ಆದ್ದರಿಂದ ಇದನ್ನು ಒಪ್ಪಲು ಸಾಧ್ಯವಿಲ್ಲವೆನ್ನುತ್ತಾನೆ. ಸರಿ, ಇದು ವಿಚಾರಿಸತಕ್ಕ ವಿಷಯವೆ. ಆದರೆ

ಅಕ್ಕನ ಉತ್ತರ ಇದಕ್ಕೆ ಸಿದ್ಧವಾಗಿಯೇ ಇದೆ. ಕಾಮ, ಕ್ರೋಧ ಲೋಭ, ಮೋಹ, ಮದ, ಮತ್ಸರಗಳಿಗೆ ಆಗರವಾಗಿರುವುದು ಈ ಒಡಲು. ಎಲ್ಲಿಯವರೆಗೆ ಇದು ತಾನು ತಾನಾಗಿಯೇ ಇರುವುದೋ ಅಲ್ಲಿಯವರೆಗೆ ಅದರ ಈ ಗುಣಗಳು ಅದರಲ್ಲಿರಲು ಸಾಧ್ಯ. ಆದರೆ ಆ ಭಾವವರತಾಗ ಅವಕ್ಕೆ ಆಸ್ಪದವಿಲ್ಲ. ಈ ಗುಣಗಳಿಂದ ದೂರಾದ ಮನುಷ್ಯನೂ ಮನುಷ್ಯನಲ್ಲ. ಅವನೀಗ ಮರೆತ ಮಾನವನಲ್ಲ; ಅರಿತ ಶರಣ. ಅವನಿಗೆ ಇದಾವುದರ ಜಂಜಡವೂ ಇಲ್ಲ. 'ಕಾಮದಿಂದ ಕಂಡ, ಕ್ರೋಧದಿಂದ ಅಸ್ತಿ, ಲೋಭದಿಂದ ಸಕಲ ವಿಷಯಂಗಳು, ಮೋಹದಿಂದ ನೋಡಿಹೆನೆಂಬುದು ಎಲ್ಲವು ಕಾಮನ ಬಲೆಯೊಳಗು'. ಆದ್ದರಿಂದ 'ಕಾಮನ ಗೆದ್ದ ಠಾವಾವುದು ?' ಎಂದ ಪ್ರಭುದೇವರಿಗೆ ಒಮ್ಮೆ ಕಾಯ ಗುಣ ಅರತಾಗ ಮತ್ತೆ ಅವು 'ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ, ಜಲವಱತ ತಟಾಕದಂತೆ, ಬೆಂದ ನುಲಿಯಂತೆ' ಹಿಂದಿನ ದೇಹದ ಸಂಬಂಧವನ್ನು ಹೊಂದಲು ಸಾಧ್ಯವಿಲ್ಲ. ತನಗೆ ಚೆನ್ನಮಲ್ಲಿಕಾರ್ಜುನನಂಗವೇ ಆಶ್ರಯವಾಗಿರುವಾಗ ಈ ದೇಹದ ಪರವೆ ಇಲ್ಲವೆನ್ನುತ್ತಾಳೆ.

ಹೀಗೆ ಮಹಾದೇವಿಯಕ್ಕ ಗಂಡನ ಕುರುಹು, ದಿಗಂಬರತ್ವದ ಕಾರಣ, ಕೇಶ ಮರೆಯಾಗಿರುವುದರ ಹಿನ್ನೆಲೆ, ದೇಹ ಗುಣದ ನಷ್ಟ ತಿಳಿಸಿದ ಮೇಲೆ ಪ್ರಭುವೇ ಮೊದಲು ಮಾಡಿಕೊಂಡು ಎಲ್ಲರೂ ತಲೆದೂಗುತ್ತಾರೆ; ಅಕ್ಕನಿಗೆ ಅನುಭವ ಮಂಟಪದಲ್ಲಿ ಪ್ರವೇಶವೀಯುತ್ತಾರೆ.

ರೂಪ–ನಿರೂಪಗಳ ಸಂಬಂಧ

ಅನುಭವ ಮಂಟಪದಲ್ಲಿ ಅಕ್ಕನಿಗೆ ಪ್ರವೇಶದೊರೆಯಿತು. ಆದರೂ ಅವಳು ಒಲಿದದ್ದು ನಿರ್ಗುಣ ನಿರಾಕಾರನಾದ ಚೆನ್ನ ಮಲ್ಲಿಕಾರ್ಜುನನನ್ನು. ಅವನೆ ತನಗೆ ಗಂಡನಾಗಬೇಕೆಂದು ಅನಂತಕಾಲ ತಪಸ್ಸನ್ನು ಮಾಡಿದ್ದಾಳೆ. ಅದಕ್ಕೆ ಆತ ಪ್ರಸನ್ನ ನಾಗಿದ್ದಾನೆ. ಆದ್ದರಿಂದ ಮಿಕ್ಕಿನ ಗಂಡಸರ ಸಂಬಂಧ ಅವಳಿಗಿಲ್ಲ. ಅವಳ ಚೆನ್ನಮಲ್ಲಿಕಾರ್ಜುನ 'ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ ಚಲುವ. ಭವವಿಲ್ಲದ ಭಯವಿಲ್ಲದ ನಿರ್ಭಯ'. ಆದರೆ ಲೋಕದ ಗಂಡರು ಸಾವು-ಕೇಡುಗಳಿಗೆ ಒಳಗಾಗುವರು. ಅಂತೆಯೆ "ಸಾವ-ಕೇಡು ತರುವ ಗಂಡರನೊಯ್ದು ಒಲೆಯೊಳಗಿಕ್ಕಲು" ಆಕೆ ಹಿಂದು ಮುಂದಾಗುವುದಿಲ್ಲ. ಇಂತಹ ನಿರ್ಭೀತಳು ಮಹಾದೇವಿಯಕ್ಕ. ಇಲ್ಲಿಯೂ ಪ್ರಭು ಆಕ್ಷೇಪ ವನ್ನು ಎತ್ತುತ್ತಾನೆ.

ಮಹಾದೇವಿಯಕ್ಕ ಪಾರ್ವತಿಯ ಸಾತ್ವಿಕ ಸ್ವರೂಪ ವಾದರೂ ಈ ಉಡುತಡಿಯ ನಿರ್ಮಲ–ಸುಮತಿಯರ ಗರ್ಭ ದಿಂದೊಗೆದ ಪಂಚ ಭೌತಿಕ ಶರೀರವುಳ್ಳವಳು. ಚೆನ್ನಮಲ್ಲಿ ಕಾರ್ಜುನನು ಇದಕ್ಕೆ ಅತೀತನು. ಆದ್ದರಿಂದ ಇಲ್ಲಿ ಸಂಬಂಧ ಘಟಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ, 'ರೂಪಿಂಗೆ ಕೇಡುಂಟು, ನಿರೂಪಿಂಗೆ ಕೇಡಿಲ್ಲ. ರೂಪು ನಿರೂಪವನೊಡ ಗೂಡುವ ಪರಿ ಎಂತು ಹೇಳಾ? ಅಸಂಬಂಧ ಸಂಬಂಧವಾಗಿ ಇದೆ. ದೇಹ ಇಂದ್ರಿಯವೆಂಬ ಜಾತಿಸೂತಕವಿರಲು, ಗೊಹೇಶ್ವರ ಲಿಂಗವ ಮುಟ್ಟಲು' ಬರುವುದಿಲ್ಲ.

ಪ್ರಭುವಿನ ಆಕ್ಷೇಪ ಸಾಮಾನ್ಯರಿಗೆ ಸಮಂಜಸವೆನಿಸಬಹು ದಾದರೂ ಅಕ್ಕನಂತಹರಿಗಲ್ಲ. ಆಕೆ ಉತ್ತರಿಸುತ್ತಾಳೆ.

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ
ಹಾವಿನ ಸಂಗವೇ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲರೆ
ಕಾಯದ ಸಂಗವೆ ಲೇಸು ಕಂಡಯ್ಯಾ
ತಾಯಿ ರಕ್ಕಸಿಯಾದಂತೆ ಕಾಯವಿಕಾರವು.
ಚೆನ್ನಮಲ್ಲಿಕಾರ್ಜುನಯ್ಯಾ, ನೀನೊಲಿದವರ
ಕಾಯಗೊಂಡಿದ್ದರೆನಬೇಡಾ.

ತಾನು ಕಾಯವಿಡಿದಿದ್ದರೂ ಕಾಯರಹಿತಳು. ಒಂದು ವೇಳೆ ತಾನು ಕಾಯ ಗುಣಗಳಿಗೆ ಒಳಗಾಗಿರುವುದೇ ಆಗಿದ್ದರೆ, ಅದರ ವಿಕಾರಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ನೂರಾರು ವಿಕಾರಗಳು ತಲೆದೋರಬೇಕು. ಆದರೆ ಹಾಗೆ ತೋರುತ್ತಿಲ್ಲ. ವಿಷದ ಹಲ್ಲು ಇರುವವರೆಗೆ ಹಾವಿನ ಬಗೆಗೆ ಭಯ. ಆ ಹಲ್ಲನ್ನೇ ಕಳೆದ ಮೇಲೆ ಎಲ್ಲಿಯ ಭಯ. ಅದರ ಸಹವಾಸದಲ್ಲಿ ಯಾವ ಆತಂಕವೂ ಇಲ್ಲ. ಅದ ರಂತೆ, ಕಾಯದ ವಿಕಾರಗಳನ್ನ ಅರಿತು ಹೊರಚೆಲ್ಲಿದಾಗ ಅದ ರೊಡನಿರುವ ಸಹವಾಸವೇನು ಮಾಡಬಲ್ಲುದು? ತಾಯಿ ರಕ್ಕಸಿ ಯಾದರೆ ಮಾತ್ರ ಅಪಾಯ. ಅದರಂತೆ ದೇಹವು ವಿಕಾರವಶ ವಾದರೆ ಮಾತ್ರ ಅದರಿಂದ ತೊಂದರೆ. ಚೆನ್ನಮಲ್ಲಿಕಾರ್ಜುನ ನನ್ನು ಒಲಿಸಿಕೊಂಡವರು ದೇಹವಿದ್ದೂ ದೇಹದ ವಿಕಾರಗಳಿಂದ

ಮುಕ್ತರಾಗಿರುತ್ತಾರೆ. ಅಕ್ಕನ ಈ ಮಾತುಗಳು ಪ್ರಭುವಿನ ಮನಸ್ಸಿಗೆ ನೆಮ್ಮದಿಯನ್ನಿತ್ತಿರಬೇಕು. ಏಕೆಂದರೆ, ಇದು ಅವನ ಸ್ವರೂಪದ ವರ್ಣನೆಯೇ ಆಗಿದೆ. ಹೀಗಿಲ್ಲದೆ ಹೋಗಿದ್ದರೆ, ಅವನು ಮಾಯಾಕೋಲಾಹಲವನ್ನು ಮಾಡಲು ಸಾಧ್ಯವಾಗುತ್ತಿತ್ತೆ?

ಅಕ್ಕ ತಾನು ತನುಗುಣವನ್ನು ವಿವರಿಸಬಲ್ಲವಳಾಗಿರಬೇಕಾದರೆ ಮನಸ್ಸು ಪ್ರಸನ್ನವಾಗಬೇಕು. ಅದು ತನ್ನ ವಿಕಾರಗಳನ್ನು ತೊಡೆದು ಹಾಕಬೇಕು. ಮನದ ವಿಕಾರಗಳನ್ನು ದೂರೀಕರಿಸುವೆನೆಂದರೆ, ಮನಸ್ಸನ್ನು ಕಲಕುತ್ತಿರುವಂತಹ ಇಂದ್ರಿಯಗಳು ಶುದ್ಧವಾಗಬೇಕು. ಹೀಗೆ, ತನು-ಮನ-ಇಂದ್ರಿಯಗಳು 'ಶುದ್ಧ ಸುಯಿಧಾನ'ವಾದಾಗ ಮಾತ್ರ ಆ ದೇವನನ್ನು ಮಾತಾಡಿಸಬಹುದು, ಕೂಡಬಹುದು ಎಂದ - ಪ್ರಭುವಿಗೆ

ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದಕೊಂಡೆನ್ನ
ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದೆನ್ನ
ಕಂಗಳು ಶುದ್ಧವಾಯಿತ್ತು ಸಕಲ ಪುರಾತನರ ನೋಡಿಯೆನ್ನ
ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿಯೆನ್ನ
ಭಾವನೆಯೆನಗಿದು ಜೀವನವು ಕೇಳಾ ಲಿಂಗತಂದೆ
ನೆಟ್ಟನೆ ನಿಮ್ಮುವ ಪೂಜಿಸಿ ಭವಗೆಟ್ಟೆನಾ ಕಾಣಾ
ಚೆನ್ನಮಲ್ಲಿಕಾರ್ಜುನಾ

ಶುದ್ಧ ಸುಯಿದಾನವನ್ನು ವಿವರಿಸುತ್ತಾಳೆ ಅಕ್ಕ. ನಿಜ. ಶಿವಭಕ್ತರೊಕ್ಕುದ ಕೊಂಡಾಗ ತನು, ನೆನೆದಾಗ ಮನ, ನೋಡಿದಾಗ ಕಣ್ಣು, ಕೇಳಿದಾಗ ಕಿವಿ ಶುದ್ಧವಾಗದೆ ಇರುತ್ತದೆಯೆ? ಅಲ್ಲದೆ

'ಬಸವಣ್ಣನ ಪಾದವನ್ನು ಕಂಡುದರಿಂದ ಅಂಗ ನಾಸ್ತಿಯಾಯಿತು. ಚೆನ್ನಬಸವಣ್ಣನ ಪಾದವನ್ನು ಕಂಡುದರಿಂದ ಪ್ರಾಣ ಬಯಲಾಯಿತು. ಪ್ರಭುವಿನ ಶ್ರೀ ಚರಣಕ್ಕೆ ಶರಣೆಂದಿರುವುದರಿಂದ ಅರಿವು ಸ್ವಯಂವಾಯಿತು.' ಹೀಗೆ ಎಲ್ಲವು ನಾಶವಾದ ಮೇಲೆ ಮತ್ತೇನಿದೆ? ಇದೂ ಅಲ್ಲದೆ ತನ್ನ 'ತಲೆ ಮೊಲೆಗಳ ನೋಡಿ ಸಲಹಿದಿರಾಗಿ, ಚೆನ್ನಮಲ್ಲಿಕಾರ್ಜುನನ ಧರ್ಮದವಳಾಗಿದ್ದಾಳೆ.' ಆಕೆಯ ಕಾಯ ಅಕಾಯ. ಜೀವ ನಿರ್ಜೀವ. ಭಾವ ನಿರ್ಭಾವವಾಗಿದೆ. ಮನದೊಳಗೆ ಘನನೆನಹಾಗಿದೆ. ಹೀಗಿರುವುದರಿಂದ ಚೆನ್ನಮಲ್ಲಿಕಾರ್ಜುನನನ್ನು ಕೂಡಲು ಇನ್ನೂ ಯಾವ ಭಿನ್ನ-ಭೇದವಿಲ್ಲವೆಂದು ನುಡಿಯುತ್ತಾಳೆ. ಏಕೆಂದರೆ, 'ಲಿಂಗವ ಲಿಂಗಮುಖದಿಂದರ್ಪಿಸಿ, ಅಂಗ ಅನಂಗವಾಗಿದೆ. ಮನವ ಅರಿವಿಂಗರ್ಪಿಸಿ, ಮನ ಲಯವಾಗಿದೆ. ಭಾವವ ತೃಪ್ತಿಗರ್ಪಿಸಿ, ಭಾವ ಬಯಲಾಗಿದೆ. ಹೀಗೆ ಅಂಗ-ಮನ-ಭಾವವಳಿದ ಕಾರಣ, ಕಾಯ ಅಕಾಯವಾಗಿದೆ. ಅವಳ 'ಕಾಯದ ಸುಖದ ಭೋಗವ ಲಿಂಗವೆ ಭೋಗಿಸುವುದಾಗಿ, ಶರಣ ಸತಿ ಲಿಂಗಪತಿಯಾಗಿದ್ದಾಳೆ. ಅಂದರೆ ಚೆನ್ನಮಲ್ಲಿಕಾರ್ಜುನನನ್ನು ಒಳಹೊಕ್ಕು ಬೆರಸಿದ್ದಾಳೆ. ಈ ಶರಣಸತಿ ಲಿಂಗಪತಿಯ ಕೂಟ 'ಒಳಹೊಕ್ಕು' ಬೆರಸುವ ಕೂಟ. ಲೋಕ ವಿಚಿತ್ರ. ಆದರೆ ಶರಣ ಸಹಜ.

'ಸತಿಯೊಳಗೆ ಪತಿ ಪ್ರವೇಶವಾಗಿ, ಪತಿಯೊಳಗೆ ಸತಿ ಒಳಹೊಕ್ಕು ಬೆರಸುವ ತನ್ನ 'ಸತಿಪತಿಯ ಸಮರಸಾನುಭವವನ್ನು ಹೇಳುವ ಸಂದರ್ಭದಲ್ಲಿ ಮಹಾದೇವಿಯಕ್ಕ ಇನ್ನೂ ಒಂದು ಅತ್ಯಂತ ಮಹತ್ವದ ಅನುಭವವನ್ನು ಹೇಳುತ್ತಾಳೆ. ಅದು ಪ್ರಭುದೇವರ 'ಕೂಡಲಿಲ್ಲದ ಘನವ ಕೂಡುವ ಪರಿ

ಯೆಂತು?' 'ಗೊಹೇಶ್ವರಲಿಂಗವ ಬೇಱು ಮಾಡಿ ಬೆರಸುವ ಪರಿಯೆಂತು ?' ಎಂಬ ಪ್ರಶ್ನೆಗಳಿಗೆ, ಆಕಾರ ನಿರಾಕಾರ, ಸಾವಯುವ ನಿರವಯುವ, ಸಾಂಗ ನಿರಂಗಗಳ ನಿಜಸಂಬಂಧವನ್ನು ಅನುಭವದಲ್ಲಿ ಕಂಡು ಹೇಳಿದ ಉತ್ತರ ಇದು:

ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೇ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದ ಉಂಟೇ ಅಯ್ಯಾ?
ಅಂಗಕ್ಕೆ ಆತ್ಮಕ್ಕೆ ಭಿನ್ನ ಉಂಟೇ ಅಯ್ಯಾ ?
ಎನ್ನಂಗವ ಶ್ರೀಗುರು ಮಂತ್ರವ ಮಾಡಿ ತೋಱಿದನಾಗಿ,
ಸಾವಯ ನಿರವಯಕ್ಕೆ ಭಿನ್ನವಿಲ್ಲವಯ್ಯಾ
ಚೆನ್ನಮಲ್ಲಿಕಾರ್ಜುನದೇವರ ಬೆರಸಿಮತಿಗೆಟ್ಟವಳ
ಏತಕ್ಕೆ ನುಡಿಸುವಿರಯ್ಯಾ ಪ್ರಭುವೆ ?

ಆಕಾರ ನಿರಾಕಾರ, ಲಿಂಗ ಆತ್ಮ, ವಿಶ್ವಬ್ರಹ್ಮಾಂಡ ಅತೀತ ಪರವನ್ನು ಪರಬ್ರಹ್ಮಗಳನ್ನು ಅವರ ಆಳಕ್ಕಿಳಿದು ತಳಬುಡ ನೋಡಿದರೆ, ಒಂದು ಗಟ್ಟಿದುಪ್ಪ ಇನ್ನೊಂದು ತಿಳಿದುಪ್ಪ. ತುಪ್ಪ ತುಪ್ಪದಲ್ಲಿ ಕೂಡುವುದು ಅಸಂಬಂಧವಲ್ಲ.

'ಚೆನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದೆನು'. ಯಾರು 'ನಾನು'. ಒಳಹೊಕ್ಕು ಬೆರಸಿ, ಸತಿಪತಿ ಒಂದಾಗಿ ನಿಂದ ಬಳಿಕ, ಗಂಡನ ಹೊರಗೆ ಬಂದು 'ನಾನು ಬೆರಸಿದೆನು' 'ನಾನು ಒಂದಾದೆನು.' ಎಂದು ಹೇಳುವುದು. ಭಾವಿಸುವುದು ಚಿದಹಂಭಾವ. ಶರಣಸತಿಯು ಅಂಗಮನ ಪ್ರಾಣ ಭಾವವೆಲ್ಲ ಲಿಂಗಪತಿಯಲ್ಲಿ ಬೆರಸಿ ಒಂದಾಗಿ ಇದ್ದರೆ, ಲಿಂಗದ ಅರಿವಿನಲ್ಲಿ 'ನಾನು' ಮೈಮರೆದು ಪರವಶವಾಗಿ ನುಡಿಯುದಿರಬೇಕು. ಇದ್ದು ಇಲ್ಲದಂತಿರುವ ಲಿಂಗದೇವನಂತೆ ಸುಮ್ಮನೆ ಇರಬೇಕು. ಶಬ್ದ

ಮುಗ್ಧವಾಗಿರಬೇಕು, ನಿಶ್ಶಬ್ದವಾಗಿರಬೇಕು. ನಿಶ್ಶಬ್ದವೇ ಶಬ್ದ ಮಾಡ ಹತ್ತಿದರೆ, ಹೆಣವೆ ನಾನು ಸತ್ತೆನೆಂದು ಕೂಗಹತ್ತಿದರೆ, ಯಾರು ಏನೆಂದು ನಂಬಬೇಕು ?

ನಾ ಸತ್ತೆನೆಂದು ಹೆಣ ಕೂಗಿದುದುಂಟೆ ? ಬೈಚಿಟ್ಟ ಬಯಕೆ
ಕರೆದುದುಂಟೆ?
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ ? ಈ ಮಾತು ಒಪ್ಪವಲ್ಲ
ಗೊಹೇಶ್ವರಲಿಂಗಕ್ಕೆ (೨೮)

ಇವು ಒಂದಕ್ಕೊಂದು ಅತ್ಯಂತ ವಿರೋಧ. 'ನಾನು ಬೆರಸಿದೆನು' ಎಂಬ ಮಾತೇ ನೀನು ಬೆರಸಿಲ್ಲ ಎಂಬುದನ್ನು ಸಾರಿಹೇಳುತ್ತದೆ. 'ನಾನು ಸತ್ತಿದ್ದೇನೆ' ಇದರ ಅರ್ಥ 'ನೀನು ಸತ್ತಿಲ್ಲ' ಎಂಬುದೇ. ಪ್ರಭುವಿನ ಈ ಆಕ್ಷೇಪ 'ನಾನು ಬ್ರಹ್ಮ' ಎಂದು ನುಡಿದ ಬ್ರಹ್ಮಜ್ಞಾನಿಗಳನ್ನು ಎಂದಿನಿಂದಲೋ ಬೆನ್ನುಹತ್ತಿದ ಆಕ್ಷೇಪ. ಪ್ರಭುದೇವರನ್ನು ಕುರಿತು ಮುಕ್ತಾಯಕ್ಕ ಸಿದ್ಧರಾಮಯ್ಯ ಮುಂತಾದವರು ಆಕ್ಷೇಪಮಾಡಿದ ಪ್ರಸಂಗಗಳನ್ನು ಇಲ್ಲಿ ಸ್ಮರಿಸ ಬಹುದು. ಶಬ್ದಮುಗ್ಧವಾಗಿರಬೇಕಾದ ಈ ಗಂಭೀರ ಪ್ರಸಂಗ ದಲ್ಲಿ ಮಹಾದೇವಿಯಕ್ಕನ ಅನುಭವದ ಉಜ್ವಲ ಎತ್ತಿದ ಆಕ್ಷೇಪ ವನ್ನು ಸಲೀಲವಾಗಿ ಆ ಕಡೆ ಸರಿಸುತ್ತದೆ. ಆ ಉಜ್ವಲದ ಮಾತು ಇದು.

ಮಣಿದೊಳಗಿ ಕನಸು ಕಂಡು ಹೇಳುವಲ್ಲಿ, ಸತ್ತ ಹೆಣ
ಎದ್ದಿತು.
ತನ್ನ ಋಣ ನಿಧಾನ ಎದ್ದು ಕರೆಯಿತ್ತು.
ಹೆಪ್ಪಿಟ್ಟ ಹಾಲು ಘಟ್ಟಿ ತುಪ್ಪವಾಗಿ ಸಿಹಿಯಾಯಿತ್ತು.

ಇದಕ್ಕೆ ತಪ್ಪ ಸಾಧಿಸಲೇಕೆ,
ಚೆನ್ನಮಲ್ಲಿಕಾರ್ಜುನದೇವರ ದೇವನಣ್ಣಗಳಿರಾ ?

ಅಕ್ಕನ ಈ ಉತ್ತರಕ್ಕೆ ಪ್ರಭುಲಿಂಗದ ಹೃದಯು ಕಂಪಿತವಾಗುತ್ತದೆ. ಅಂಗ ಪ್ರತ್ಯಂಗದಿಂದ ಪರೀಕ್ಷೆ ಮಾಡಿದ ಪ್ರಭು ಅವಳ ಅನಾಭಾವ ಪೂರ್ಣ ಉತ್ತರಕ್ಕೆ ತಲೆದೂಗುತ್ತಾನೆ. 'ಇದು ಲೇಸಾಯ್ತು. ತುಂಬಿದ ಲೆಕ್ಕಕ್ಕೆ ಮತ್ತೊಂದೆಂದು ಕಡೆಗಾಣಿಸುವಂತೆ, ಸ್ಥಾಣುವಿನ ಮಂಜಿಯು ಚೋರನಂತೆ, ಅಂಬುಧಿಯು ಕೊಂಬಿನಲ್ಲಿದ್ದ ವಿಹಂಗದಂತೆ, ಎಲ್ಲಿ ಬಂದಡೂ ಗೊಹೇಶ್ವರನೆಂಬ ಭಾವ ಒಂದಾಯಿತ್ತು.' ಎಂದು ಉದ್ಗಾರ ತೆಗೆಯುತ್ತಾನೆ.

ಅಕ್ಕನ ನಿರಹಂಭಾವ :

ಈ ಮಾತಿನಿಂದ ಅಕ್ಕ ಗರ್ವಿಷ್ಟಳಾಗುತ್ತಾಳೆಯೆ ? ಇಲ್ಲ. ನಿರಹಂಭಾವ ಅವಳಲ್ಲಿ ತಲೆದೋರುತ್ತದೆ. ಚೆನ್ನಮಲ್ಲಿಕಾರ್ಜುನನಲ್ಲಿ ಬೆರಸಿ ಬೇರಿಲ್ಲದಿಪ್ಪವಳಲ್ಲವೆ ? ಅಂದಮೇಲೆ ಅಹಂಭಾವ ಮೂಡುವುದೆಲ್ಲಿ? ನಿರಹಂಭಾವ ತಾನೇ ತಾನಾಗಿ ಸೂಸುತ್ತದೆ.

'ನಾ ಪ್ರಪಂಚಿನ ಪುತ್ಥಳಿ. ಮಾಯಿಕದ ಮಲಭಾಂಡ' ಎಂದು ತನ್ನ ತಪ್ಪನ್ನು ಒಪ್ಪಿಕೊಳ್ಳುವಂತೆ ಕೇಳಿಕೊಳ್ಳುತ್ತಾಳೆ. ಏಕೆಂದರೆ, (೩೯) ಅವರೆಲ್ಲ ಚೆನ್ನಮಲ್ಲಿಕಾರ್ಜುನ ದೇವರ ಸ್ವರಪೂದವರೆ ಆಗಿದ್ದಾರೆ. ಅವರಲ್ಲಿ ತನ್ನ ತಪ್ಪೊಪ್ಪಿಗೆಯನ್ನು ಕೇಳದೆ ಇನ್ನಾರಲ್ಲಿ ಕೇಳಬೇಕು? ಇಷ್ಟೇ ಅಲ್ಲ. ಈ ವರೆಗೆ ಪ್ರಭು ತನ್ನನ್ನು ಪರಿಪರಿಯಾಗಿ ಪ್ರಶ್ನಿಸಿದುದಕ್ಕೂ ಆಕೆಗೆ ಅಸಮಾಧಾನವಿಲ್ಲ. ಅದಕ್ಕೆ ಪ್ರತಿಯಾಗಿ ತನ್ನ ನಿಜಸ್ವರೂಪವನ್ನು ತಿಳಿಯು

ವಲ್ಲಿ ಅದು ಸಹಾಯಕಾರಿಯಾಯಿತೆಂದೇ ಭಾವಿಸುತ್ತಾಳೆ. ಎಂತಹ ಕಷ್ಟ ಪರಂಪರೆಗೂ ತನ್ನನ್ನು ಅಣಿಗೊಳಿಸಿಕೊಳ್ಳುತ್ತಾಳೆ. 'ಕೊಂದರೂ ಶರಣೆಂಬುದನ್ನು ಮಾಣಳು.' ಏಕೆಂದರೆ, ಅವ ಳೀಗ ಚಂದನ, ಸುವರ್ಣ, ಕಬ್ಬಿನಂತಿದ್ದಾಳೆ. ಈ ವಸ್ತುಗಳಿಗೆ ತೊಂದರೆ ಕೊಟ್ಟರೂ ಅವು ತಮ್ಮ ಸಹಜ ಗುಣಗಳಾದ ಕಂಪು, ಹೊಳಪು, ಸಿಹಿತನಗಳನ್ನು ಬಿಡಲಾರವು. ಒಂದು ವೇಳೆ 'ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿ'. ಆದ್ದರಿಂದ ಅವುಗಳನ್ನು ಮರಳಿ ಜ್ಞಾಪಿಸದೆ ಮರೆಯುವುದೇ ಒಳಿತು.

ಇದರಿಂದ ಪ್ರಭುದೇವರು ಸಂತೋಷಿಸುತ್ತಾರೆ. ಮಹಾದೇವಿ ಯಕ್ಕನ, 'ಅಂಗ ಅಂಗನೆಯ ರೂಪಲ್ಲದೆ ಮನವಸ್ತುಭಾವದಲ್ಲಿ ಬೆಚ್ಚಂತಿರ್ಪುದು.' 'ಬಂದ ಕಥನದಲ್ಲಿ ಬಂದು' ಭವಮಾಲೆ ಯನ್ನೇ ಹಿಂಗಿದ್ದಾಳೆ. ಅಕ್ಕ ಗೊಹೇಶ್ವರ ಲಿಂಗದಲ್ಲಿ ಉಭಯ ನಾಮವಳಿ'ದಿದ್ದಾಳೆ. (೪೧) ನಾನು, ನೀನೆಂಬ ಉಭಯ ನಾಮವನ್ನು ಅಳಿಯುವುದು ಸಾಮಾನ್ಯವೆ? ಅವು ಅಳಿದ ವಿಧಾನ ವನ್ನು ಅಕ್ಕ ವಿವರಿಸುತ್ತಾಳೆ. 'ಅಂಗ ಸಂಗದಲ್ಲಿ ಲಿಂಗಸಂಗಿ ಯಾದೆ. ಲಿಂಗ ಸಂಗದಲ್ಲಿ ಅಂಗ ಸಂಗಿಯಾದೆ.' ಈ 'ಉಭಯ ಸಂಗವನರಿಯದೆ ಪರಿಣಾಮಿಯಾದೆನು. ನುಡಿಯ ಗಡಣವ ಮುಱಿದು ತೆರಹಿಲ್ಲದಿದ್ದರೇನು? ಎನ್ನ ದೇವ ಚೆನ್ನಮಲ್ಲಿಕಾರ್ಜು ನನ ಬೆರಸಿದ ಬಳಿಕ, ಎನ್ನ ನಾನು ಏನೆಂದೂ ಅಱಿಯೆ ನಯ್ಯಾ'. ಚೆನ್ನಮಲ್ಲಿಕಾರ್ಜುನನಲ್ಲಿ ಬೆರಸಿದ ಬಳಿಕ ಮತ್ತೇನೂ ಉಳಿಯಲಾರದು, ಸುಳಿಗಾಳಿ ಗಾಳಿಯಲ್ಲಿ, ತೆರೆ-ತೆರೆಯಲ್ಲಿ ಅಡಗುವಂತೆ. ಇದು ಅಕ್ಕನ ಸ್ಥಿತಿ.

ಲಿಂಗಾಂಗ ಸಂಬಂಧ :

ಇಲ್ಲಿಯವರೆಗೆ ಮೂಕಪ್ರೇಕ್ಷಕನಾಗಿದ್ದ ಬಸವಣ್ಣ ಅಕ್ಕನನ್ನು ನುಡಿಸುತ್ತಾನೆ. ಅಂಗದಲ್ಲಿ ಲಿಂಗಸಂಗವನ್ನು ಲಿಂಗದಲ್ಲಿ ಅಂಗಸಂಗವನ್ನು ಮಾಡಿರುವುದಾಗಿ ಹೇಳಿದರೆ, ಇವೆರಡರಲ್ಲಿರುವ ಭೇದವನ್ನು ಕಳೆಯುವ ವಿಧಾನವು ಎಂಥದು ? ಅಂದರೆ ಅಲ್ಲಿ ಹೇಗಾದರೂ ಅವಕಾಶ ಉಳಿಯಲೇಬೇಕು. ಶರಣಸತಿ, ಲಿಂಗಪತಿ ಎಂದಿರಿಸಿಕೊಂಡು ಅಂಗದಲ್ಲಿ ಲಿಂಗಸಂಗವನ್ನು ಮಾಡಹೊರಟರೆ ಅವನು ಕಾಮವಿಕಾರಕ್ಕೆ ಒಳಗಾಗಿಸಿ ಏಡಿಸಿ ಕಾಡುತ್ತಾನೆ. ಇನ್ನು ಇದಕ್ಕೆ ವ್ಯತಿರಿಕ್ತವಾಗಿ ಲಿಂಗದಲ್ಲಿ ಅಂಗವನ್ನು ಕೂಡಿಸಹೊರಟರೆ ಅವನು ಕೂಡಿಕೆಗೆ ಒಳಗಾಗದೆ ಅತ್ತತ್ತ ಓಡುವನು. ಇನ್ನು ಈ ಕೂಟವನ್ನು ಸಾಧಿಸಬೇಕಾದರೆ ಹೆಣ್ಣು-ಗಂಡಾದರೆ ಮಾತ್ರ ಸಾಧ್ಯ. ಭಿನ್ನವಿಲ್ಲದ ಕಲಿಯಾದರೆ ಮಾತ್ರ ಸಾಧ್ಯ. ಹೀಗಿರುವಾಗ ನೀನು ಬೆರಸಿಬೇರಿಲ್ಲದಿಹೆನೆಂಬುದು ಹೇಗೆ ಸತ್ಯ? (೪೨) ಎಂದಾಗ ಮಹಾದೇವಿಅಕ್ಕ ತನ್ನ ಕಲಿತವನ್ನು ಮೆರೆಸುತ್ತಾಳೆ. ಏಕೆಂದರೆ, ಈ ಕಲಿತನಕ್ಕೆ ಕಾರಣ ಬಸವಣ್ಣನೆ. **ಬಸವಣ್ಣನ ದಯದಿಂದಲೆ ಕಾಮನನ್ನು ಗೆಲೆದಿದ್ದಾಳೆ, ಸೋಮ**ಧರನನ್ನು ಹಿಡಿತಂದಿದ್ದಾಳೆ. ಅವನ ದಯದಿಂದಲೆ 'ನಾಮದಲ್ಲಿ ಹೆಣ್ಣುರೂಪಲ್ಲದೆ, ಭಾವಿಸಲು ಗಂಡುರೂಪು' 'ಅತಿಕಾಮಿಯಾದ ಚೆನ್ನಮಲ್ಲಿಕಾರ್ಜುನನಿಗೆ ತೊಡರನ್ನಿಕ್ಕಿ ಕೂಡಿದ್ದಾಳೆ. ಎರಡರಿಯದೆ ಮೆರೆದಿದ್ದಾಳೆ. (೪೪) ಅಲ್ಲದೆ, ಅಂಗದಲ್ಲಿ ಲಿಂಗವನ್ನು, ಮನದಲ್ಲಿ ಮನವನ್ನು, ಭಾವದಲ್ಲಿ ಭಾವವನ್ನು, ಅರಿವಿನಲ್ಲಿ ಅರಿವನ್ನು, ಐಕ್ಯಮಾಡಿದ್ದಾಳೆ. ಕ್ರೀಗಳೆಲ್ಲವು ನಿಃಕ್ರೀಗ

ಳಾಗಿವೆ. ನಾ, ನೀ ಎಂಬಿವೆರಡೂ ಅಳಿದಿವೆ. ಲಿಂಗದಲ್ಲಿ ಐಕ್ಯವಾಗಿವೆ. ಹೀಗೆ, ತನಗೆ ಬೇರೆ ಅಸ್ತಿತ್ವವೆ ಇಲ್ಲವೆಂದಾಗ ಬಸವಣ್ಣ ಮೆಚ್ಚಿಕೊಳ್ಳದಿರುತ್ತಾನೆಯೆ ?

'ಹೆಂಗೂಸಿನಂಗವ ನೋಡಿರೆ, ಪುರಾತನರು !
ಬಾಲತನದಂಗವ ನೋಡಿರೆ, ಪುರಾತನರು
ಬ್ರಹ್ಮವನಾಚರಿಸಿ ತನ್ನ ಮಱೆದಿಪ್ಪುದ ನೋಡಿರೆ,
ಲಿಂಗವಂತರು !
ತನ್ನಲ್ಲಿ ತಾನು ನಿಶ್ಚಯುವಾಗಿ, ಭಾಷೆ ಬೀಸರವೊಗದೆ ಇಪ್ಪ
ಇರವು,
ಕೂಡಲಸಂಗಮದೇವರಲ್ಲಿ ನಮ್ಮ ಮಹಾದೇವಿ
ಯಕ್ಕಂಗಾಯಿತ್ತು.'

ಇದು ನಿಜವಾದ ಲಿಂಗವಂತನ ಸ್ವರೂಪ. ಸರ್ವಾಂಗಲಿಂಗ ಸ್ವರೂಪ. ಇದು ಮಹಾದೇವಿಯಕ್ಕನ ಸ್ವರೂಪ.

ಇಲ್ಲಿಗೆ ಮಹಾದೇವಿಯಕ್ಕನ ಅನುಭವಮಂಟಪದಲ್ಲಿಯ ಪರೀಕ್ಷೆ ಮುಗಿಯುತ್ತದೆ. ಅನುಭಾವಗೋಷ್ಠಿಯ ಅನುಭವಿಕರೆಲ್ಲರಿಗೆ ಸಾತ್ವಿಕ ಸ್ವರೂಪದ ದರ್ಶನವಾಗುತ್ತದೆ. ಆನಂದ ತುಂದಿಲರಾಗುತ್ತಾರೆ.

ಮತ್ತೊಂದು ದಿನ

ಅಕ್ಕನ ಪ್ರಶಂಸೆ

ಅಕ್ಕನ ಬಗೆಗಿದ್ದ ಸಂಶಯವೆಲ್ಲ ಪರಿಹಾರವಾಗಿದೆ. ಪ್ರಭು ಅನುಭಾವ ಸುಖದಿಂದ ಅಕ್ಕನನ್ನು ಮಾತಾಡಿಸಿ, ಹಿಂಜಿ ಹಿಂಜಿ ನೋಡಿ, ಅವಳ ಅಂತರಂಗದ ಸಾತ್ವಿಕ ಸ್ವರೂಪವನ್ನೇ ಹೊರ

ದೆರೆದು ತೋರಿದ್ದಾನೆ. ಪರಸ್ಪರರು ತಂತಮ್ಮ ಅನುಭಾವಗಳನ್ನು ಹಂಚಿಕೊಂಡು ಸಂತೋಷ ಶರಧಿಯಲ್ಲಿ ಓಲಾಡುತ್ತಿದ್ದಾರೆ. ಹೀಗೆ ಎಷ್ಟೋ ದಿನಗಳು ಗತಿಸುತ್ತವೆ, ಅಕ್ಕ ಈಗ ಮಹಾಮನೆಯಲ್ಲಿ ಮಹಾಮನೆಯುವಳೆ ಆಗಿದ್ದಾಳೆ. ಅವಳ ಉಜ್ವಲ ತೇಜಸ್ಸು ಎಲ್ಲರನ್ನು ಹರ್ಷಗೊಳಿಸಿದೆ. ಇಲ್ಲಿ ಮತ್ಸರಕ್ಕೆ ಅವಕಾಶವಿಲ್ಲ. ಈ ವರೆಗೆ ಮೂಗುವಟ್ಟಂತಿರ್ದ ಕೋಗಿಲೆಯು ವಸಂತನಾಗಮನದಿಂದ ಉದ್ಭವಿಸಿಧ ಕಳಿಕೆಗರ್ಚಿ ಕೂಗಲು ತೊಡಗುವಂತೆ ಒಬ್ಬೊಬ್ಬರೆ ಅಕ್ಕನನ್ನು ಕೊಂಡಾಡಲು ತೊಡಗುತ್ತಾರೆ.

೧) ಪ್ರಭುದೇವರಿಂದ

ಮೊಟ್ಟ ಮೊದಲಿಗೆ ಪ್ರಭುದೇವರೆ ಅಕ್ಕನಿಗೆ ನಮೋ ನಮೋ ಎನ್ನುತ್ತಾರೆ. ಈಗ ಅವಳು ಪರೀಕ್ಷೆಗೊಳಗಾದ ಅಭ್ಯರ್ಥಿಯಲ್ಲ; ಅವನು ಪರೀಕ್ಷೆ ಮಾಡುವ ಪರೀಕ್ಷಕನಲ್ಲ. ಆಕೆ ಸಾಕ್ಷಾತ್ ಚಿತ್‌ಶಕ್ತಿಸ್ವರೂಪಳು. ಇದನ್ನೇ ಪ್ರಭುದೇವರ ಶ್ರೀಮುಖದಿಂದ ಹೀಗೆ ಕೇಳಬಹುದು :

ಆದಿಶಕ್ತಿ ಅನಾದಿಶಕ್ತಿಯೆಂಬರು. ಅದನಾರು ಬಲ್ಲರಯ್ಯಾ?
ಆದಿ ಎಂದರೆ ಕುಲಹಿಂಗೆ ಬಂದಿತ್ತು; ಅನಾದಿ ಎಂದರೆ
ನಾಮಕ್ಕೆ ಬಂದಿತ್ತು.
ಆದಿಯಲ್ಲ, ಅನಾದಿಯಲ್ಲ.
ನಾಮವಿಲ್ಲದ ಸೀಮೆಯಿಲ್ಲದ ನಿಜಶಕ್ತಿ ಚಿಚ್ಛಕ್ತಿಯಾಯಿತ್ತು
ನೋಡಾ!

ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ,
ಗೊಹೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ
ಶ್ರೀಪಾದಕ್ಕೆ ನಮೋ ನಮೋ ಎಂಬೆನು

ಅಕ್ಕ 'ಅಂಗೈಯ ಲಿಂಗದಲ್ಲಿ ಕಂಗಳ ನೋಟ'ವನ್ನು ದೃಢೀಕರಿಸಿ ಅದರಲ್ಲಿಯೆ ಲೀನಳಾಗಿದ್ದಾಳೆ. ಸ್ವಾನುಭಾವದಿಂದ ತನ್ನನ್ನು ತಾನರಿತಿದ್ದಾಳೆ. ತನ್ನಿಂದ ತಾನೆ ಆಗಿದ್ದಾಳೆ.

೨) ಚೆನ್ನಬಸವಣ್ಣನಿಂದ

ಆದ್ಯಂತದ ಪರೀಕ್ಷೆಯನ್ನು ನೀರಿಕ್ಷಿಸಿದ ದಿವ್ಯಜ್ಞಾನಿ ಚೆನ್ನ ಬಸವಣ್ಣನ ದೃಷ್ಟಿಯಲ್ಲಿ ಅಕ್ಕ ಎಳೆವರೆಯದ ಹೆಂಗೂಸಲ್ಲ. 'ಕೂಡಲ ಚೆನ್ನ ಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯ ತನ'ವುಳ್ಳವಳು. ಏಕೆಂದರೆ, 'ಅಜಕಲ್ಪಕೋಟಿ ವರುಷದವರೆಲ್ಲರು ಹಿರಿಯರಲ್ಲ. ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲ ಹಿರಿಯರಲ್ಲ. ನಡು ಮುರಿದು, ಗುಡುಗೂರಿ, ತಲೆ ನಡುಗಿ, ನರೆತೆರೆಹೆಚ್ಚಿ, ಮತಿಗೆಟ್ಟು, ಒಂದನಾಡಹೋಗಿ ಒಂಭತ್ತ ನಾಡುವ ಅಜ್ಞಾನಿಗಳೆಲ್ಲರು ಹಿರಿಯರಲ್ಲ. ಅನುವನರಿದು, ಘನವ ಬೆರಸಿ, ಹಿರಿದು ಕಿರಿದೆಂಬ ಭೇದವ ಮರೆದವರು ಹಿರಿಯರು'. ಇಂತಹ ಸ್ಥಿತಿಯುಳ್ಳವಳು ಮಹಾದೇವಿಯಕ್ಕ.

ಇಷ್ಟಾದರೂ ಅಕ್ಕ ನಿರಹಂಭಾವಿ. ಪ್ರಭುದೇವನಂತಹರು ಪ್ರಸನ್ನರಾದಾಗ ಏನಾಗದಿರುತ್ತದೆ.? 'ನೀನೊಲಿದು ಕೊಂಡಾಡಿದರೆ ಇರುಹೆ ರುದ್ರನಾಗದೆ ಹೇಳಯ್ಯಾ' ಅದರಂತೆ 'ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಶಿವನು ಇಳಿತಂದಿದ್ದಾನೆ' ಇದರಿಂದ 'ಕತ್ತಲೆಯ ಪಾಳೆಯವನ್ನು ರವಿ ಹೊಕ್ಕಂತಾಗಿದೆ.'

ಅವನು 'ಚಿತ್ತದ ಪ್ರವೃತ್ತಿಯು ಹಂಗಿಸಿ, ಅಸಂಖ್ಯಾತ ಗಣಂಗಳಿಗೆ ಮುಕ್ತಿಪಥವನ್ನು ತೋರಿದ್ದಾನೆ.' ಆತನ 'ತನುವೆಲ್ಲಾ ಸ್ವಯು ಲಿಂಗ, ಮನವೆಲ್ಲಾ ಚರಲಿಂಗ, ಭಾವವವೆಲ್ಲಾ ಮಹಾಘನದ ಬೆಳಗು.' ಇಂತಹ 'ಶರಣ ಸಮ್ಯಗ್‌ಜ್ಞಾನಿ ಚೆನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.' ಎನ್ನುತ್ತಾಳೆ ಅಕ್ಕ.

ಮಹಾದೇವಿಯಕ್ಕನ ವಚನ ಎಂತಹ ಮಹತ್ವಪೂರ್ಣ ವಾದುದು, ಸಾಮರ್ಥವುಳ್ಳುದು ಎಂಬುದನ್ನು ಚೆನ್ನಬಸವಣ್ಣ ವಿವರಿಸುತ್ತಾನೆ. 'ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ-ಬಸವಣ್ಣನವರ–ಇಪ್ಪತ್ತು ವಚನ, ಪ್ರಭುದೇವರ ಹತ್ತು ವಚನ, ಅಜಗಣ್ಣನ ಐದು ವಚನ ಇವಕ್ಕೆ ಮಹಾದೇವಿಯಕ್ಕನ ಒಂದು ವಚನವು ಸಮಾನವಾಗಿದೆ. ಅದು ನಿರ್ವಚನ.' ಚೆನ್ನಬಸವಣ್ಣ ಕೇವಲ ತುಲನಾತ್ಮಕ ದೃಷ್ಟಿಯಿಂದ ನೋಡಿದ್ದರೆ ಅದರ ಲ್ಲೇನೂ ಅಷ್ಟು ಮಹತ್ವವಿರಲಿಲ್ಲ. ಆದರೆ ಅಕ್ಕನ ವಚನ ನಿರ್ವಚನವೆನ್ನುವಲ್ಲಿಯೇ ಈ ವಚನದ ಸ್ವಾರಸ್ಯವಡಗಿದೆ.

೩) ಸಿದ್ಧರಾಮನಿಂದ

ಚೆನ್ನಬಸವಣ್ಣನ ಈ ಮಾತಿಗೆ ಶಿವಯೋಗಿ ಸಿದ್ಧರಾಮ ಅಸ್ತು ಎನ್ನುತ್ತಾನೆ. ಜೊತೆಗೆ 'ಮಱಹಿಂಗೆ ಹಿರಿದು-ಕಿಱಿದುಂಟ ಲ್ಲದೆ, ಅಱಿವಿಂಗೆ ಹಿರಿದು-ಕಿಱಿದುಂಟೆ ಹೇಳಯ್ಯಾ? ಸಾವಿಂಗೆ ಭಯ ಉಂಟಲ್ಲದೆ, ಅಜಾತಂಗೆ ಭಯ ಉಂಟೆ ಹೇಳಯ್ಯಾ? ಕಪಿಲಸಿದ್ಧಮಲ್ಲಿನಾಥನಲ್ಲಿ ಮಹಾದೇವಿಯಕ್ಕನ ನಿಲುವಿಂಗೆ

ಶರಣೆಂದು ಶುದ್ಧನಾದೆನು ಕಾಣಾ ಚೆನ್ನ ಬಸವಣ್ಣಾ.' ತಾನು ಅವಳಿಗೆ ಶರಣಾಗತನಾಗಿ ಶುದ್ಧನಾದುದಾಗಿ ತಿಳಿಸುತ್ತಾನೆ. ಏಕೆಂದರೆ, ಅರಿದೊಡೆ ಶರಣ. ಮರೆದೊಡೆ ಮಾನವ. ಅವಳು ಶರಣ ಸ್ವರೂಪಳು. ಹಿರಿದು ಕಿರಿದನ್ನು ಮೀರಿದ ಅರಿವಿನ ಮೂರ್ತಿ. ಸಾವನೀಡಾಡಿದ ಅಜಾತಳು. ಅವಳಿಂದ ಶುದ್ಧನಾಗದೆ ಇನ್ನಾರಿಂದ ಆಗಬೇಕು?

೪) ಮಡಿವಾಳ ಮಾಚಿದೇವರಿಂದ

ಮಡಿವಾಳ ಮಾಚಯ್ಯನು ಬಸವಣ್ಣನೆ ಗತಿಯೆಂದು ಅಕ್ಕ ಕಲ್ಯಾಣಕ್ಕೆ ಆಗಮಿಸುವಾಗ ತಾನು ಮಡಿಯನ್ನು ಹಾಸಿ ಸ್ವಾಗತಿಸಿದ್ದಾನೆ. ಆ ಮಡಿ ಎಂತಹದು? ಅದು ಸಾಮಾನ್ಯವಾದುದಲ್ಲ, ಅಸಾಮಾನ್ಯವಾದುದು. ಅದನ್ನು ಅಕ್ಕ ತನ್ನ ಅಂತಃಶಕ್ತಿಯಿಂದ ಅರಿತಿದ್ದಾಳೆ. 'ನಡೆವುದಕ್ಕೆ ಹಾಸಿದ ಮಡಿಯು ಸರ್ವಾಂಗಕ್ಕೆ ಹೊದಿಯುತ್ತಾಳೆ. ಆ 'ಮಡಿಯು ಬೆಳಗಿನ ಬೆಳಗಿನೊಳಗೆ ನಿರ್ವಯಲಾಗುತ್ತದೆ.' ಅವಳು ಕಾಮಿಯಾಗಿ ನಿಃಕಾಮಿಯಾದವಳು. ಸೀಮೆಯಲ್ಲಿದ್ದು ನಿಃಸೀಮೆಯಾದವಳು. ಭವಿಯ ಸಂಗವ ತೊರೆದು ಭವಬಾಧೆಯ ಹರಿದವಳಲ್ಲವೆ? ಅಂದ ಮೇಲೆ ಆ ಮಡಿಯನ್ನು ಸರ್ವಾಂಗದಲ್ಲಿಯೂ ಹೊದ್ದುಕೊಂಡು ಬೆಳಗಿನಲ್ಲಿ ಬೆಳಗಾಗದಿರುವಳೆ? ಇಂತಹ ಮಹಾದೇವಿಯಕ್ಕನನ್ನು ಬಸವಣ್ಣನ ದಯದಿಂದ ಕಂಡುದಾಗಿ ಮಾಚಯ್ಯ ಬಿನ್ನವಿಸುತ್ತಾನೆ. ಪ್ರಭು ಇದಕ್ಕೆ ಪುಷ್ಟಿಯನ್ನೀಯುತ್ತಾನೆ. ಏಕೆಂದರೆ, ಅಕ್ಕ 'ನುಡಿಗೆಡೆಗೊಡದ ಘನವ ಹಿಡಿದು ಒಡಬಂದಿಯಾದವಳು.

ಎಡೆಯಿಲ್ಲದ ಪರಿಪೂರ್ಣದೊಳಗೆ ನಡೆಸುಡಿಗೆಟ್ಟವಳು. ತನ್ನ ನಿಲುಗಡೆಯ ನಿಜವ ತಾನಱಿಯದಂತೆ ಎನ್ನಿಂದ ಕೇಳಿ ಸ್ವಯ ವಾದವಳು.' ಆದ್ದರಿಂದ, 'ಮಹಾದೇವಿಯಕ್ಕನ ನಿಲವ ಕೊಂಡಾಡುವುದಕ್ಕೆ ತೆಱಹಿಲ್ಲ.'

೫) ಅರಿವು

ಮಡಿವಾಳ ತಂದೆ ಮತ್ತು ಪ್ರಭುದೇವರ ಮಾತುಗಳನ್ನು ಶಾಂತ ಚಿತ್ತದಿಂದ ಕೇಳಿದ ಅಕ್ಕ ಇದೆಲ್ಲವು ಪ್ರಭುವಿನ ಪ್ರಸಾದ ವೆನ್ನುತ್ತಾಳೆ. ಎಲ್ಲಾ ಎಲ್ಲವನಱಿದು ಫಲವೇನಯ್ಯಾ, ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅಱಿವು ಸ್ವಯವಾಗಿರಲು ಅನ್ಯರ ಕೇಳಲುಂಟೆ? ಚೆನ್ನ ಮಲ್ಲಿಕಾರ್ಜುನ, ನೀನಱಿವಾಗಿ ಮುಂದು ದೋಱಿದ ಕಾರಣ, ನಿಮ್ಮಿಂದ ನಿಮ್ಮನಱಿದೆನಯ್ಯಾ ಪ್ರಭುವೆ.

೬) ಸಂಗಸುಖ

ಈಗ ಮಹಾದೇವಿ ಶರಣರ ಅನುಭಾವ ಗೋಷ್ಠಿಯಲ್ಲಿ ಭಾಗಿಯಾಗಿ ಹರ್ಷಾತಿರೇಕದಲ್ಲಿದ್ದಾಳೆ. ಅವರ ಸಹವಾಸದಿಂದ ಏನೆಲ್ಲವನ್ನು ಪಡೆದಿದ್ದಾಳೆ. ಅಂತೆಯೆ, 'ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಸಂಗದಿಂದಲ್ಲದೆ ಬೀಜ ಮೊಳೆದೋಱದು. ಸಂಗ ದಿಂದಲ್ಲದೆ ದೇಹವಾಗದು. ಸಂಗದಿಂದಲ್ಲದೆ ಸರ್ವಸುಖದೋ ಱದು.' ಹೀಗೆ ಸಂಗದಿಂದಲೆ ಎಲ್ಲವು ಘಟಿಸುವುದೆಂದು ಹೇಳುತ್ತ, 'ಶರಣರ ಅನುಭಾವದಿಂದ ತಾನು ಪರಮಸುಖಿ ಯಾಗಿ ಬದುಕಿದುದಾಗಿ' ತಿಳಿಸುತ್ತಾಳೆ. 'ಶರಣರಿಂತು ಎನ್ನ ಸಾಗು ಮಾಡಿದ ಕಾರಣ ನಿಮ್ಮ ಶರಣರಿಗೆ' ತಾನು ತೊಡಿಗೆ

ಯಾಗಿದ್ದಾಳೆ. ತನ್ನ ಮತ್ತು ಶರಣರ ಸಂಬಂಧವು ಅಂತಹ ಮಧುರವಾದುದೆ ಆಗಿದೆ. ಅದನ್ನು ಅವಳು ನೆನೆಸದೆ ಇಲ್ಲ. 'ಬಸವಣ್ಣನ ಮನೆಯ ಮಗಳಾಗಿ ಬದುಕಿದ್ದರಿಂದ ಅವನು 'ತನ್ನ ಕರುಣ ಭಕ್ತಿ ಪ್ರಸಾದವ ಕೊಟ್ಟಿದ್ದಾನೆ.' 'ಚೆನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ' ಅವನು 'ಒಕ್ಕಪ್ರಸಾದವ ಕೊಟ್ಟಿದ್ದಾನೆ.' 'ಪ್ರಭುದೇವರ ತೊತ್ತಿನ ತೊತ್ತಿನ ಮಗಳಾದ ಕಾರಣ, ಅವನು 'ಜ್ಞಾನಪ್ರಸಾದವನ್ನು ಕೊಟ್ಟಿದ್ದಾನೆ.' 'ಸಿದ್ಧರಾಮಯ್ಯನ ಶಿಶು ಮಗಳಾದ ಕಾರಣ,' ಅವನು 'ಪ್ರಾಣಪ್ರಸಾದವನ್ನು ಸಾಧಿಸಿಕೊಟ್ಟಿದ್ದಾನೆ.' 'ಮಡಿವಾಳ ಮಾಚಿ ತಂದೆಯ ಮನೆಯ ಮಗಳಾದ ಕಾರಣ,' ಅವನು 'ನಿರ್ಮಳ ಪ್ರಸಾದವನ್ನು ನಿಶ್ಚಯಿಸಿಕೊಟ್ಟಿದ್ದಾನೆ' ಹೀಗೆ ಅಸಂಖ್ಯಾತ ಶರಣರೆಲ್ಲರು 'ತಮ್ಮ ಕರುಣದ ಕಂದನೆಂದು ತಲೆದಡಹಿ ರಕ್ಷಿಸಿದ ಕಾರಣ ಅಕ್ಕ 'ಚೆನ್ನಮಲ್ಲಿಕಾರ್ಜನನ ಪಾದಕ್ಕೆ ಯೋಗ್ಯಳಾಗಿದ್ದಾಳೆ.'

೭) ಅಂಗದವಸಾನ

ಹಾತೊರೆದು ಹಂಬಲಿಸಿ ಕಲ್ಯಾಣಕ್ಕೆ ಆಗಮಿಸಿ ಶರಣರ ಅನುಭಾವಗೋಷ್ಠಿಯಲ್ಲಿ ತನ್ನೆಲ್ಲ ಮನದ ಅಳಿದುಳಿದ ಕಾಳಿಕೆಗಳನ್ನು ಕಳೆದುಕೊಂಡಿದ್ದಾಳೆ. ಇನ್ನು ಆಕೆಗೆ ಏನೂ ಬೇಕಾಗಿಲ್ಲ. 'ಕರ್ಮವೆಂಬ ಕಥಳಿ ಎನಗೆ. ಕಾಯವೆಂಬ ಕದಳಿ ನಿಮಗೆ. ಮಾಟವೆಂಬ ಕದಳಿ ಬಸವಣ್ಣಂಗೆ. ಭಾವವೆಂಬ ಕದಳಿ ಚನ್ನ ಬಸವಣ್ಣಂಗೆ. ಬಂದ ಬಂದ ಭಾವ ಸಲೆ ಸಂದಿತ್ತು.' ಆದ್ದ

ರಿಂದ ತನ್ನ 'ಅಂಗದವಸಾನವಾಗುವ' ಸ್ಥಳವನ್ನು ಅಕ್ಕ ಪ್ರಭು ವನ್ನು ಕೇಳುತ್ತಾಳೆ. ಪ್ರಭು ಆ ಸ್ಥಾನವನ್ನು ವಿವರಿಸುತ್ತಾನೆ.

ನೀ ನಾನೆಂಬುಭಯ ಸಂಗವಳಿದು ತಾನು ತಾನಾದ
ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ
ನೋಡಲು,
ಬಟ್ಟ ಬಯಲು ಕಾಣಬಹುದು ನೋಡಾ.
ಆ ಬಯಲ ಬೆರಸುವರೆ ತ್ರಿಕೂಟಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ
ಕದಳಿಯು ಕಳೆದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ.
ನಡೆಯಲ್ಲಿಗೆ ತಾಯೆ.

ಗೊಹೇಶ್ವರ ಲಿಂಗದಲ್ಲಿ ಪರಮ ಪದವಿ ನಿನಗೆ ಸ್ವಯ ವಹುದು ನೋಡಾ. 'ತ್ರಿಕೂಟವೆಂಬ ಮಹಾಗಿರಿ' ಎಂದರೆ ಭ್ರೂಮಧ್ಯಸ್ಥಾನ. ಈ ಸ್ಥಾನದಲ್ಲಿ ಆಜ್ಞಾಚಕ್ರವಿದೆ. ಇಲ್ಲಿ ನಿರಂತರ ಬೆಳಗುವ ಪರಂಜ್ಯೋತಿಯ ಹೆಸರು ಮಹಾಲಿಂಗ. **ಇಲ್ಲಿಂದಲೆ ಮುಂದೆ ಮಾರ್ಗ.** ಆಜ್ಞಾಚಕ್ರದಿಂದ ಮುಂದೆ ಬ್ರಹ್ಮರಂಧ್ರದ ನಿಷ್ಕಳಲಿಂಗ. ಅಲ್ಲಿಂದ ಮುಂದೆ ಶಿಖಾಚಕ್ರದ ಶೂನ್ಯಲಿಂಗ. ಅದರಾಚೆ ಪಶ್ಚಿಮಚಕ್ರದ ಏಕದಳ ಮಂಟಪದಲ್ಲಿ ಮೂರ್ತ ಮಾಡಿರುವ ನಿರಂಜನ ಲಿಂಗ. ಈ ನಿರಂಜನ ಲಿಂಗ ವನ್ನು ಕೂಡಿದರೆ ಎರಡಳಿದು ಒಂದಾಗುತ್ತದೆ. ಆದರೆ ಕದಳಿ ಯನ್ನು ಕಳೆದು ಒಳಹೊಕ್ಕು ನೋಡುವ ಸ್ಥಿತಿಯಿದು. ಅಲ್ಲೇನಿದೆ? ಬರಿಯ ಬಯಲು. ತೊಳಗಿ ಬೆಳಗುವ ಜ್ಯೋತಿ

ಅದೇ ಶರಣರು ಇರುವ, ಆಗಿ ಇರುವ 'ಬಯಲು ಸೀಮೆ'. ನಿರವಯಲ ಪದ.

ಕೊನೆಯ ನಮಸ್ಕಾರ

ಅಕ್ಕನ ಅಭೀಷ್ಟ ಇಲ್ಲಿಗೆ ಪೂರೈಸಿತು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು. ಅಂತೆಯೆ ಅವಳು ತನ್ನ ಗಂಡ ಚೆನ್ನಮಲ್ಲಿ ಕಾರ್ಜುನನನ್ನು ಕೂಡುವ ತವಕದಿಂದ ಹೊರಟಿದ್ದಾಳೆ. ಅವ ಳನ್ನು ಗಂಡನ ಮನೆಗೆ ಕಳುಹಿಸಲು ಅಸಂಖ್ಯಾತರೆಲ್ಲರು ನೆರೆ ದಿದ್ದಾರೆ. ಅವರು ಅಕ್ಕನಿಗೆ ಹೇಳಬೇಕಾದುದೆಲ್ಲವನ್ನು ಹೇಳಿ ದ್ದಾರೆ. ಶರಣ ಸತಿಗೆ ಹೆಚ್ಚಿಗೆ ಹೇಳುವದೇನಿದೆ? ಆಕೆಯೂ ಅವರಿಂದ ಬೀಳ್ಕೊಳ್ಳುತ್ತಲಿದ್ದಾಳೆ. ಅವಳ ಅಂತಃಕರಣವೇ ನುಡಿಯುತ್ತಿದೆ. ಮರೆಯಲಾಗದು ನಾನು ನಿಮ್ಮ ಶಿಶು ವೆಂದು. ಎನ್ನನು ಚೆನ್ನಮಲ್ಲಿಕಾರ್ಜುನನ ಬೆರಸೆಂದು ಹರಸು ತ್ತಿಹುದು.' ಎಂದು ಎಲ್ಲ ಮಹಾಂತರಲ್ಲಿ ಕೇಳುತ್ತ ತನ್ನ ಹಿಂದಿನ ಸ್ಥಿತಿಯನ್ನು, ಈಗಿರುವ ಮಟ್ಟಕ್ಕೆ ಬಂದುದನ್ನು ವಿವರಿಸು ತ್ತಾಳೆ.

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ !
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ.
ವಿವಾಹವ ಮಾಡಿದಿರಿ ಸಯಿವಪ್ಪ ಗಂಡಂಗೆ ಕೊಟ್ಟಿರಿ.

ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ
ನೆರೆದು ಬಂದಿರಿ.
ಬಸವಣ್ಣ ಮೆಚ್ಚಲೊಗತನವ ಮಾಡುವೆ
ಚೆನ್ನಮಲ್ಲಿಕಾರ್ಜುನನ ಕೈವಿಡಿದು,
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನವಧರಿಸಿ,
ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೆಯ್ವುದು
ಶರಣು ಶರಣಾರ್ಥಿ.

ಸಾಮಾನ್ಯರ ಸಂದರ್ಭದಲ್ಲಿ ಕರುಳೇ ಕಿತ್ತುಬರುವ ಸನ್ನಿವೇಶವಿದು. ಆದರೆ ಶರಣರು ರಾಗದ್ವೇಷ ವಿಮುಕ್ತರು ಸಮಚಿತ್ತರು. ಆಕ್ಕನ ಮಾತು, ಮಾತುಗಳಲ್ಲ; ಜ್ಯೋತಿರ್ಲಿಂಗ. 'ಬಸವಣ್ಣ ಮೆಚ್ಚಲೊಗತನವ ಮಾಡುವು'ದಾಗಲಿ, ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆ'ನೆನ್ನುವುದಾಗಲಿ ನಿತ್ಯ ಪ್ರಾಥಃಸ್ಮರಣೀಯ. ಅಕ್ಕ ಅಧೋವದನೆಯಾಗಿ 'ಮರಳಿ ಬಿಜಯಂಗೆಯ್ವುದು. ಶರಣು ಶರಣಾರ್ಥಿ' ಎಂದಾಗ ಅಶ್ರುಧಾರೆಯಾಗಿ ಹರಿದಿರಬೇಕು. ಆದರೆ ಅದರ ಹಿಂದಿದ್ದ ಭಾವ ಲೋಕೋತ್ತರವಾದುದು. ಅವಳಿಗೂ ಅಷ್ಟೆ. ದೇಹ ಅಗಲುತ್ತಿದ್ದರೂ ಮನ ಕದಲದೇ ಇದೆ.

ಅಯ್ಯಾ, ನಿಮ್ಮ ಮಹಾಂತರ ಕೂಡಿದ ಸುಖವನುಪಮೆಗೆ
ತರಬಾರದಯ್ಯಾ!
ಅಯ್ಯಾ, ನಿಮ್ಮ ಮಹಾಂತರ ಕೂಡಿ ಅಗಲುವ
ಧಾವತಿಯಿಂದ ಸಾವುದು ಕರಲೇಸಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,

ನಿಮ್ಮ ನಿಜವನರಿದ ಮಹಾಮಹಿಮರನಗಲಿ ನಿಲ ಲಾರೆನಯ್ಯಾ. ಇವರೊಳ್ಳು ವಿಗಿಲಾಗಿ ವಿರಹದುರಿಯ ಬೇಗೆ ಯನ್ನು ಆರುಹಲುಂಟೆ? ಅಂತೂ ಅಕ್ಕ ಶರಣ ಸಂಗದಿಂದಗಲಿ ಕದಳಿಯತ್ತಲಭಿಮುಖವಾಗಿ ಚೆನ್ನಮಲ್ಲಿಕಾರ್ಜುನನನ್ನು ಕೂಡುವ ತವಕದಿಂದ ಶ್ರೀ ಗಿರಿಯತ್ತ ಧಾವಿಸಿತ್ತಾಳೆ.

ಅನುಭವ ಮಂಟಪಕ್ಕೆ ಕೊನೆ

ಹೀಗೆ ಉಡುತಡಿಯ ಮಹಾದೇವಿಯಕ್ಕ ಸಾವ-ಕೇಡು ತರುವ ಗಂಡರನೊಯ್ದು ಒಲೆಯೊಳಗಿಕ್ಕಿ, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವ ಗಂಡಂಗೆ ಒಲಿದು, ದಿಗಂಬರದ ದಿವ್ಯಾಂಬರೆ ಯಾಗಿ, ಅಣ್ಣ ಬಸವಣ್ಣನ ಮಹಾಮನೆಯ ಮಗಳಾಗಿ, ಅಸಂಖ್ಯಾತರು ಒಲಿದು ಕೊಟ್ಟ ಮನೆಗೂ ಕೊಂಡ ಮನೆಗೂ ಒಪ್ಪುವಂತೆ ಒಗತನವ ಮಾಡಿ, ಮಹಾಂತರ ಮಂಡೆಗೆ ಹೂವ ತರುವುದಲ್ಲದೆ ಹುಲ್ಲ ತಾರೆನೆಂಬ ವಚನದೊಂದಿಗೆ ಅನುಭಾವಿ ಗಳಿಂದ ಬಿಳ್ಕೊಂಡು ಚೆನ್ನಮಲ್ಲಿಕಾರ್ಜುನನೊಡವೆರೆಯಲು ಕದಳಿಯನ್ನು ಸಾರುತ್ತಾಳೆ. ಇಂತಹ ಅಕ್ಕನ ಜೀವನ ದಿವ್ಯ ಜೀವನ, ಆದರ್ಶ ಜೀವನ.

ಅಡಿ ಟಿಪ್ಪಣಿಗಳು

೧) ಒಂದನೆಯ ಶೂನ್ಯ ಸಂಪಾದನೆಯಲ್ಲಿ ಮಹಾದೇವಿಯ ತಂದೆ-ತಾಯಂದಿರಿಗೆ ಬೆದರಿಕೆ ಹಾಕಿ ಕೌಶಿಕ ಮಹಾದೇವಿಯನ್ನು ಮದುವೆಯಾಗುತ್ತಾನೆ.

೨) ಒಂದು ಮತ್ತು ಎರಡನೆಯ ಶೂನ್ಯಸಂಪಾದನೆಗಳಲ್ಲಿಯೂ ಹರಿಹರನಲ್ಲಿಯೂ ಅಕ್ಕ ಮಹಾದೇವಿ ಕೌಶಿಕನನ್ನು ಮದುವೆಯಾದಂತೆಯೂ ಅವಳು ಹಾಕಿದ ಮೂರು ಕರಾರುಗಳನ್ನು ಮುರಿಯಲು ಆಕೆ ಅವನನ್ನು ತೊರೆಯುತ್ತಿದ್ದಂತೆ 'ಸೀರೆಯಂ ಪಿಡಿದೆಳೆಯೆ ಬಿಟ್ಟು ದಿಗಂಬರೆಯಾಗಿ' ಬಂದಳೆಂದು ವಿವರಿಸಲಾಗಿದೆ.

೩) ದಿಗಂಬರತ್ವದ ವಿಷಯವಾಗಿ ಅನೇಕ ವಚನಗಳು ಬರುತ್ತವೆ. ಇವುಗಳಿಂದಲೇ ಅಕ್ಕನ ವ್ಯಕ್ತಿತ್ವ ರೂಪುಗೊಂಡಿದೆ. ದಿಗಂಬರತ್ವವನ್ನು ತೆಗೆದು ಹಾಕುವುದೆಂದರೆ ಆ ವಚನಗಳನ್ನು ತೆಗೆದು ಹಾಕಿದಂತೆಯೆ. ಹೀಗೆ ವಚನಗಳನ್ನು ತೆಗೆದು ಹಾಕುತ್ತ ಹೋದರೆ ಅದಕ್ಕೆ ಕೊನೆಯೆಲ್ಲಿ? ಆದ್ದರಿಂದ ಮಹಾದೇವಿ ದಿಗಂಬರೆಯಾಗಿಯೇ ಹೋದಳೆನ್ನುವುದು ನಮ್ಮ ಅಭಿಮತ.

೪) ಹರಿಹರನಲ್ಲಿ ಮಹಾದೇವಿ ನೇರವಾಗಿ ಶ್ರೀಶೈಲಕ್ಕೆ ಹೋಗುತ್ತಾಳೆ. ಹಿಂದಿರುಗಲು ತಂದೆ-ತಾಯಂದಿರು ಆಗ್ರಹಪಡಿಸಿದರೂ ವ್ಯರ್ಥವಾಗುತ್ತದೆ. ವೇಷಧಾರಿಯಾಗಿ ಕೌಶಿಕನು ಶ್ರೀಶೈಲದವರೆಗೆ ಅಕ್ಕನನ್ನು ಬೆನ್ನತ್ತಿ ಹುಲ್ಮಠ-ಕಲ್ಮಠಗಳ ಗುರುಗಳಿಗೆ ಲಂಚವಿತ್ತು ಅವಳನ್ನು ಒಲಿಸಿಕೊಳ್ಳಲು ಪ್ರಯತ್ನಿ

ಸುತ್ತಾನೆ. ಅದೂ ನಿಷ್ಫಲವಾಗುತ್ತದೆ. ಹರಿಹರನಲ್ಲಿ ಕಲ್ಯಾಣದ ಸನ್ನಿವೇಶವಿಲ್ಲ'ದಿರುವುದು ನಿಗೂಢ ಸಮಸ್ಯೆ.

೫) ಹರಿಹರನಲ್ಲಿ ಕಿನ್ನರಯ್ಯ ಅಕ್ಕನನ್ನು ಸಂಧಿಸುವುದು ಶ್ರೀಶೈಲದಲ್ಲಿ; ಕಲ್ಯಾಣ ಪಟ್ಟಣದ ಹೊರವಲಯದಲ್ಲಲ್ಲ.

ಎರಡನೆಯ ಶೂನ್ಯ ಸಂಪಾದನೆಯಲ್ಲಿ ಕಿನ್ನರಯ್ಯ ವಿನೋದಾರ್ಥವಾಗಿ ಕಲ್ಯಾಣ ಪಟ್ಟಣದ ಹೊರವಲಯದಲ್ಲಿ ಬಂದಿರುವಾಗ ದಿಗಂಬರೆಯಾದ ಅಕ್ಕನನ್ನು ಕಂಡು ಮೋಹಿಸುತ್ತಾನೆ. ಅವಳನ್ನು ಕಾಮಾತುರದಿಂದ ಬರಸೆಳೆಯುತ್ತಾನೆ. ಅವಳ ದೇಹ ಸಂಪೂರ್ಣವಾಗಿ ಶಿವತತ್ತ್ವಮಯವಾಗಿರುವುದನ್ನು ಕಂಡು ಅವನಿಗೆ ಜ್ಞಾನೋದಯವಾಗುತ್ತದೆ. ಪಶ್ಚಾತ್ತಾಪದಿಂದ ದಗ್ಧನಾಗಿ ಅಕ್ಕನಿಗೆ ಅಭಿನಂದಿಸಿ ಹಿಂದಿರುಗುತ್ತಾನೆ. ಅಕ್ಕ ಅವನನ್ನು ಕ್ಷಮಿಸುತ್ತಾಳೆ.

—o—

ಉಪನ್ಯಾಸ ಗ್ರಂಥ ಮಾಲೆಯ ಕೆಲವು
ಉಪಯುಕ್ತ ಪ್ರಕಟನೆಗಳು

---

೧. ಹರಿಹರನು ಚಿತ್ರಿಸಿದ ಶಿವಶರಣೆಯರು –ಬಿ. ಬಿ. ಹೆಂಡಿ

೨. ಬಸವಣ್ಣನವರ ಧ್ಯೇಯಾದರ್ಶಗಳಿಗೆ ಸಮಕಾಲೀನರ ಕೊಡುಗೆ –ಎಸ್. ಜಿ. ಹಂಡಿ

೩. ಅನುಭವ ಮಂಟಪದಲ್ಲಿ ಶಿವಶರಣೆಯರು –ಶಶಿಕಲಾ ಮೋಳ್ದಿ

೪. ನಿಜಗುಣ ಶಿವಯೋಗಿಗಳ ಭಕ್ತಿ, ಜ್ಞಾನ, ವೈರಾಗ್ಯ –ಪಿ. ಎಂ. ಸಿದ್ಧಯ್ಯ

೫. ಬಾಲಲೀಲಾ ಮಹಾಂತ ಶಿವಯೋಗಿ –ಎಸ್. ಎಸ್. ಭೂಸರಡ್ಡಿ

೬. ಮೈಲಾರ ಬಸವಲಿಂಗ ಶರಣರು –ದೇವೇಂದ್ರಕುಮಾರ ಹಕಾರಿ

೭. ತೋಂಟದ ಸಿದ್ಧಲಿಂಗ ಶಿವಯೋಗಿಗಳು –ಎ. ಆರ್. ಪಾಟೀಲ

೮. ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳವರ ಚರಿತ್ರೆ –ಜ. ಕೃಷ್ಣರಾವ

೯. ಶರಣ ಸಾಹಿತ್ಯ – ಬಿ. ಎಸ್. ಗೊರವರ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ